विपत्प्रतीकारपरेण मङ्गलं निषेव्यते भूतिसमुत्सुकेन वा ।
जगच्छरण्यस्य निराशिषः सतः किमेभिराशोपहतात्मवृत्तिभिः ॥

Auspicious things are used by a person interested in remedying some evil, or by one

eagerly desiring wealth. But of what good are these things, which through hope oppress the states of the mind, to that virtuous person who is without desires and who is the refuge of the universe? [76]

ವಿಪತ್-ಪ್ರತೀಕಾರಪರೇಣ = ಅನರ್ಥಗಳನ್ನು ಪರಿಹರಿಸಬೇಕೆಂದಿರುವವನಿಂದ ವಾ= ಅಥವಾ ಭೂತಿಸಮುತ್ಸುಕೇನ=ಐಶ್ವರ್ಯಾಭಿಲಾಷೆಯುಳ್ಳವನಿಂದ ಮಂಗಲಂ= ಮಂಗಲದ್ರವ್ಯವು ನಿಷೇವ್ಯತೇ = ಸೇವಿಸಲ್ಪಡುತ್ತದೆ. ಜಗತ್+ ಶರಣ್ಯಸ್ಯ = ಜಗತ್ತಿಗೇ ರಕ್ಷಕನಾಗಿರುವ ನಿರಾಶಿಷಃ=ಆಶೆಯೇ ಇಲ್ಲದ ಸತಃ = ಶಿವನಿಗೆ ಅಶಾ+ಉಪಹತ+ಆತ್ಮವೃತ್ತಿಭಿಃ = ಆಸೆಯಿಂದ ದೂಷಿತವಾದ ಅಂತಃಕರಣ ವೃತ್ತಿಯುಳ್ಳ ಏಭಿಃ=ಈ ಮಂಗಳ ದ್ರವ್ಯಗಳಿಂದ ಕಿಂ=ಏನಾಗಬೇಕಾಗಿದೆ ? [76]

अकिञ्चनः सन्प्रभवः स सम्पदां
[1]त्रिलोकनाथः पितृसद्मगोचरः । [1] स लोकनाथः
स भीमरूपः शिव इत्युदीर्यते
न सन्ति याथार्थ्यविदः पिनाकिनः ॥ ७७ ॥

Being penniless, he is the source of riches; seen in cemeteries, he is the lord of the three worlds; terrific in form, he is called the felicitous. There are none who know the reality of S'iva. [77]

ಸಃ=ಆ ಶಿವನು ಅಕಿಂಚನಃ ಸನ್=ದರಿದ್ರನೇ ಆದರೂ ಸಂಪದಾಂ= ಐಶ್ವರ್ಯಗಳಿಗೆ ಪ್ರಭವಃ=ಉತ್ಪತ್ತಿಸ್ಥಾನವಾಗಿದ್ದಾನೆ. ಪಿತೃಸದ್ಮಗೋಚರಃ (ಸನ್) = ಶ್ಮಶಾನದಲ್ಲಿ ಕಾಣಿಸಿಕೊಳ್ಳುವವನಾದರೂ ತ್ರಿಲೋಕನಾಥಃ = ಮೂರು ಲೋಕಗಳಿಗೂ ಒಡೆಯನಾಗಿದ್ದಾನೆ. ಸಃ=ಅವನು ಭೀಮರೂಪಃ= ಭಯಂಕರರೂಪವುಳ್ಳವನೇ ಆದರೂ ಶಿವಃ ಇತಿ=ಶಿವ (ಮಂಗಳಕರ) ಎಂದು ಉದೀರ್ಯತೇ=ಹೇಳಲ್ಪಡುತ್ತಾನೆ. ಪಿನಾಕಿನಃ=ಪಿನಾಕಪಾಣಿಯಾದ ಶಿವನ ಯಾಥಾರ್ಥ್ಯ-ವಿದಃ = ನಿಜವಾದ ಸ್ವರೂಪವನ್ನು ತಿಳಿದವರು ನ ಸಂತಿ= ಇಲ್ಲವೇ ಇಲ್ಲ. [77]

विभूषणोद्भासि पिनद्धभोगि वा गजाजिनालम्बि दुकूलधारि वा ।
कपालि वा [1]स्यादथवेन्दुशेखरं न विश्वमूर्तेरवधार्यते वपुः ॥७८॥

[1] अथ चन्द्रशेखरम्

The body of him, whose form is the universe, whether glittering with ornaments or wrapped with serpents, whether bearing an elephant-hide or dressed in silk, and whether with a skull (in hand) or moon-crested, cannot be comprehended.

ವಿಶ್ವಮೂರ್ತೇಃ = ವಿಶ್ವಮೂರ್ತಿಯುಳ್ಳ ಶಿವನ ವಪುಃ = ಶರೀರವು ವಿಭೂಷಣ+ಉದ್ಭಾಸಿ = ಒಡವೆಗಳಿಂದ ಹೊಳೆಯುತಕ್ಕದ್ದಾಗಿ ಸ್ಯಾತ್= ಇರಬಹುದು. ವಾ= ಅಥವಾ ಪಿನದ್ಧಭೋಗಿ (ಸ್ಯಾತ್) = ಹಾವು ಸುತ್ತಿಕೊಂಡದ್ದಾಗಿ ಇರಬಹುದು; ಗಜ+ಅಜಿನ+ಆಲಂಬಿ (ಸ್ಯಾತ್)=ಆನೆಯ ಚರ್ಮ ಹೊದೆದಿರುವುದಾಗಿರಬಹುದು; ವಾ = ಅಥವಾ ದುಕೂಲ-ಧಾರಿ (ಸ್ಯಾತ್) = ರೇಷ್ಮೆ ವಸ್ತ್ರ ಉಟ್ಟಿರುವುದಾಗಿರಬಹುದು; ವಾ = ಅಥವಾ ಕಪಾಲಿ (ಸ್ಯಾತ್) = ಕಪಾಲವನ್ನು ಹಿಡಿದದ್ದಾಗಿರಬಹುದು; ಅಥವಾ, ಇಂದುಶೇಖರಂ (ಸ್ಯಾತ್) = ಚಂದ್ರನನ್ನೇ ಕಿರೀಟವಾಗಿ ಧರಿಸಿದ್ದಾಗಿರಬಹುದು; ನ ಅವಧಾರ್ಯತೇ = ಹೀಗೆಯೇ ಎಂದು ನಿರ್ಧರಿಸಲಾಗುವುದಿಲ್ಲ. (ಎಲ್ಲವೂ ಸಂಭವವೇ). [78]

तदङ्ग[1]संसर्गमवाप्य कल्पते
ध्रुवं चिताभस्मरजो विशुद्धये ।
तथाहि नृत्याभिनयक्रियाच्युतं
[2]विलिप्यते मौलिभिरम्बरौकसाम् ॥ ७९ ॥

[1] संस्पर्शम् [2] विलुप्यते

Gaining contact with his body, even the ashy dust of the funeral pyre stands undoubtedly for sanctification. That is why the ashy dust dropped

down from his body during his dance-poses is smeared by gods on their heads. [79]

ತತ್+ಅಂಗ-ಸಂಸರ್ಗಂ=ಅವನ ಅಂಗದ ಸಂಸರ್ಗವನ್ನು ಅವಾಪ್ಯ=ಹೊಂದಿ ಚಿತಾಭಸ್ಮ=ಚಿತೆಯ ಬೂದಿಯೂ ರಜೋ-ವಿಶುದ್ಧಯೇ=ರಜೋಗುಣದ ಶುದ್ಧಿಗಾಗಿ ಕಲ್ಪತೇ=ಪರ್ಯಾಪ್ತವಾಗುತ್ತದೆ (ಎಂಬುದು) ಧ್ರುವಂ=ಪ್ರಮಾಣಸಿದ್ಧವಾಗಿದೆ. ತಥಾ ಹಿ=ಹಾಗೆಯೇ ಸರಿ! ನೃತ್ಯ+ಅಭಿನಯ-ಕ್ರಿಯಾ-ಚ್ಯುತಂ=ತಾಂಡವ ನೃತ್ಯದ ಅಭಿನಯ ಮಾಡುವಾಗ ಕೆಳಗೆ ಬಿದ್ದ (ಚಿತಾಭಸ್ಮದ ಧೂಳು) ಅಂಬರ+ಓಕಸಾಂ=ದೇವತೆಗಳ ಮೌಲಿಭಿಃ=ಕಿರೀಟಗಳಿಂದ ವಿಲಿಪ್ಯತೇ=ಧರಿಸಲ್ಪಡುತ್ತದೆ. [79]

असम्पदस्तस्य वृषेण गच्छतः प्रभिन्नदिग्वारणवाहनो वृषा ।
करोति पादावुपगम्य मौलिना विनिद्रमन्दाररजोरुणाङ्गुली ॥

Indra, riding on the Airāvata in rut and going to S'iva who has no wealth and who goes on a bull, renders his feet red in the toes with the pollen of the full blown MANDĀRA flowers bowing down with his crown. [80]

ಪ್ರಭಿನ್ನ-ದಿಗ್ವಾರಣ-ವಾಹನಃ=ಮದೋದಕವನ್ನು ಸುರಿಸುತ್ತಿರುವ ಐರಾವತವೆಂಬ ದಿಗ್ಗಜವನ್ನೇ ವಾಹನವಾಗಿ ಉಳ್ಳ ವೃಷಾ=ಇಂದ್ರನೇ ಅ-ಸಂಪದಃ=ಬಡವನೂ ವೃಷೇಣ ಗಚ್ಛತಃ=ವೃಷಭಾರೂಢನಾಗಿ ಸಂಚರಿಸುವವನೂ ಆದ ತಸ್ಯ=ಆ ಶಿವನ ಪಾದೌ=ಪಾದಗಳಿಗೆ ಮೌಲಿನಾ=ಕಿರೀಟದೊಡನೆ ಉಪಗಮ್ಯ=ನಮಸ್ಕರಿಸಿ ವಿನಿದ್ರ-ಮಂದಾರ-ರಜಃ+ಅರುಣ+ಅಂಗುಲೀ=(ಆ ಪಾದಗಳು) ಅರಳಿದ ಮಂದಾರ ಪುಷ್ಪಗಳ ಪರಾಗಗಳಿಂದ ಕೆಂಪಾದ ಬೆರಳುಗಳುಳ್ಳಂತೆ ಕರೋತಿ=ಮಾಡುತ್ತಾನೆ. [80]

विवक्षता दोषमपि च्युतात्मना
त्वयैकमीशं प्रति साधु भाषितम् ।
यमामनन्त्यात्मभुवोऽपि कारणं
कथं स लक्ष्यप्रभवो भविष्यति ॥ ८१ ॥

By you deprived of reason, although desirous of speaking out his defects, one thing has been rightly spoken about S'iva. How can he, whom (the wise) declare to be the cause of even the self-begotten Brahma, be of known origin? [81]

ಚ್ಯುತ+ಆತ್ಮನಾ = ನಷ್ಟವಾದ ಪರಾಮರ್ಶವುಳ್ಳವನಾದ್ದರಿಂದಲೇ ದೋಷಂ = ದೋಷವನ್ನೇ ವಿವಕ್ಷತಾ ಅಪಿ = ಹೇಳ ಬಯಸುತ್ತಿದ್ದರೂ ತ್ವಯಾ = ನಿನ್ನಿಂದ ಈಶಂ ಪ್ರತಿ=ಶಿವನನ್ನು ಕುರಿತು ಏಕಂ=ಒಂದು ಮಾತ್ರ ಸಾಧು=ಸರಿಯಾಗಿ ಭಾಷಿತಂ=ಹೇಳಲ್ಪಟ್ಟಿತು. ಯಂ=ಯಾವನನ್ನು ಆತ್ಮಭುವಃ ಅಪಿ=ಬ್ರಹ್ಮನಿಗೂ ಕೂಡ ಕಾರಣಂ=ಕಾರಣನನ್ನಾಗಿ ಆಮನಂತಿ=(ವಿದ್ವಾಂಸರು) ಹೇಳುತ್ತಾರೋ ಸಃ = ಆ ಶಿವನು ಕಥಂ= ಹೇಗೆ ತಾನೆ ಲಕ್ಷ್ಯಪ್ರಭವಃ=ಎಲ್ಲರಿಗೂ ಗೋಚರವಾಗುವಂತಹ ಜನ್ಮವುಳ್ಳವನಾಗಿ ಭವಿಷ್ಯತಿ=ಆಗುವನು? [81]

अलं विवादेन यथा [1]श्रुतस्त्वया तथाविधस्तावदशेषमस्तु सः ।
ममात्र भावैकरसं मनः स्थितं न कामवृत्तिर्वचनीयमीक्षते ॥

[1] श्रुतं त्वया

Enough of disputing. Let him be just the same as has been heard by you. My mind with the pre-eminent sentiment of love, has been fixed on him. A person who acts with a will does not care for contrary reports." [82]

ವಿವಾದೇನ=ಕಲಹವು ಅಲಂ=ಸಾಕು. ಸಃ=ಆ ಶಿವನು ತ್ವಯಾ= ನಿನ್ನಿಂದ ಯಥಾ=ಯಾವ ಪ್ರಕಾರವಾಗಿ ಶ್ರುತಃ=ಕೇಳಲ್ಪಟ್ಟದ್ದಾನೋ ಅಶೇಷಂ=ಸಂಪೂರ್ಣವಾಗಿ ತಥಾವಿಧಃ ತಾವತ್=ಅದೇ ಪ್ರಕಾರವಾಗಿ ಬೇಕಾದರೂ ಅಸ್ತು=ಇರಲಿ. ಮಮ=ನನ್ನ ಮನಃ=ಮನಸ್ಸು ಅತ್ರ= ಈ ಶಿವನಲ್ಲಿ ಭಾವೈಕರಸಂ=ಶೃಂಗಾರಭಾವವೊಂದೇ ಮುಖ್ಯವಾದ ರಸವುಳ್ಳದ್ದಾಗಿ ಸ್ಥಿತಂ=ಇದೆ. ಕಾಮವೃತ್ತಿಃ=ತನ್ನ ಇಷ್ಟದಂತೆಯೇ ಆಚರಿಸುವ

ವನು ವಚನೀಯಂ= ಲೋಕಾಪವಾದವನ್ನು ನ ಈಕ್ಷತೇ= ಗಣನೆಗೆ ತೆಗೆದುಕೊಳ್ಳುವುದಿಲ್ಲ. [82]

निवार्यतामालि किमप्ययं वटुः
पुनर्विवक्षुः स्फुरितोत्तराधरः ।
न केवलं यो महतोऽपभाषते
शृणोति तस्मादपि यः स पापभाक् ॥ ८३ ॥

"O friend, let this Brahmin lad, who has his lower lip throbbing and is (obviously) desirous of saying something once again, be restrained. Not only he who speaks ill of the Great, but also the one who lends his ears to him, becomes a partaker of sin. [83]

ಆಲಿ= ಸಖಿಯೇ! ಸ್ಫುರಿತ + ಉತ್ತರ + ಅಧರಃ= ವಿಶೇಷವಾಗಿ ಅದುರುತ್ತಿರುವ ತುಟಿಯುಳ್ಳ ಅಯಂ= ಈ ವಟುಃ= ಬ್ರಹ್ಮಚಾರಿಯು ಕಿಂ ಅಪಿ= ಏನನ್ನೋ ಪುನಃ= ತಿರುಗಿಯೂ ವಿವಕ್ಷುಃ= ಹೇಳಬಯಸು ತ್ತಿದ್ದಾನೆ. ನಿವಾರ್ಯತಾಂ=(ಅವನು) ತಡೆಯಲ್ಪಡಲಿ. ಮಹತಃ=ದೊಡ್ಡವರನ್ನು ಯಃ=ಯಾವನು ಅಪಭಾಷತೇ=ಅಲ್ಲಗಳೆಯುತ್ತಾನೋ (ಸಃ) ಕೇವಲಂ ನ=(ಅವನು) ಮಾತ್ರವಲ್ಲ. ತಸ್ಮಾತ್= ಅವನಿಂದ ಯಃ= ಯಾವನು ಶೃಣೋತಿ=(ಅಂತಹ ನಿಂದೆಯನ್ನು) ಕಿವಿಗೊಟ್ಟು ಕೇಳುತ್ತಾನೋ ಸಃ ಅಪಿ=ಅವನೂ ಕೂಡ ಪಾಪಭಾಕ್=ಪಾಪಭಾಗಿಯಾಗುತ್ತಾನೆ. [83]

इतो गमिष्याम्यथवेति वादिनी चचाल बाला [1]रयभिन्नवल्कला ।
स्वरूपमास्थाय च तां कृतस्मितः समाललम्बे वृषराजकेतनः ॥

[1] स्तनभिन्नवल्कला

Or, I myself will go away from this place (or person)"—saying thus, that youthful girl, whose (upper) bark-garment slipped down (from her

breasts) in her impetuosity, made a move. And (at once), the bull-bannered god S'iva, assuming his own form, held her up, with a smile. [84]

ಅಥವಾ, ಇತಃ=ಇಲ್ಲಿಂದ ಗಮಿಷ್ಯಾಮಿ=(ನಾನೇ) ಹೊರಟು ಹೋಗುತ್ತೇನೆ ಇತಿ=ಎಂದು ವಾದಿನೀ=ಹೇಳುತ್ತಾ ರಯ ಭಿನ್ನವಲ್ಕಲಾ= ವೇಗದಿಂದ ಜಾರಿದ ನಾರುಮಡಿಯುಳ್ಳ ಬಾಲಾ=ಬಾಲೆಯಾದ ಪಾರ್ವತಿಯು ಚಚಾಲ=(ಅಲ್ಲಿಂದ) ಚಲಿಸಿದಳು. ಚ=ಅದೇ ಕಾಲಕ್ಕೆ ಸರಿಯಾಗಿ ವೃಷರಾಜಕೇತನಃ=ವೃಷಭಧ್ವಜನಾದ ಶಿವನೂ ಕೂಡ ಸ್ವರೂಪಂ= ತನ್ನ (ನಿಜವಾದ) ರೂಪವನ್ನು ಆಸ್ಥಾಯ=ತಾಳಿ ಕೃತಸ್ಮಿತಃ=ನಗುತ್ತಾ ತಾಂ=ಅವಳನ್ನು ಸಮಾಲಲಂಬೇ=ಹಿಡಿದುಕೊಂಡನು. [84]

तं वीक्ष्य वेपथुमती सरसाङ्गयष्टि-
[1]निंक्षेपणाय पदमुद्धृतमुद्वहन्ती ।
मार्गाचलव्यतिकराकुलितेव सिन्धुः
शैलाधिराजतनया न ययौ न तस्थौ ॥ ८५ ॥

[1] निक्षेप एव

Trembling on seeing him, with her slender body in sweat, the daughter of the lord of mountains, bearing up a foot raised for stepping forward, neither went forward nor stayed, like a river agitated in its course by the obstruction of a mountain. [85]

ತಂ=ಅವನನ್ನು ವೀಕ್ಷ್ಯ=ನೋಡಿ ವೇಪಥುಮತೀ=ನಡುಕದಿಂದ ಕೂಡಿದ, ಸರಸ+ಅಂಗಯಷ್ಟಿಃ=ಬೆವರು ತುಂಬಿದ ಶರೀರವುಳ್ಳ, ನಿಕ್ಷೇಪಣಾಯ=ಮುಂದೆ ಇಡುವುದಕ್ಕಾಗಿ ಉದ್ಧೃತಂ=ಮೇಲಕ್ಕೆತ್ತಿದ್ದ ಪದಂ= ಪಾದವನ್ನು ಉದ್ವಹಂತೀ=ಎತ್ತಿದ್ದಹಾಗೆಯೇ ಇಟ್ಟುಕೊಂಡಿದ್ದ ಶೈಲಾಧಿರಾಜತನಯಾ=ಪರ್ವತರಾಜನ ಮಗಳಾದ ಪಾರ್ವತಿಯು ಮಾರ್ಗ+ಅಚಲ -ವ್ಯತಿಕರ+ಆಕುಲಿತಾ=ದಾರಿಯಲ್ಲಿ ಸಿಕ್ಕಿದ ಬೆಟ್ಟದಿಂದಾದ ಪ್ರತಿಬಂಧಕದಿಂದ ಆಕುಲಗೊಂಡ ಸಿಂಧುಃ ಇವ=ನದಿಯಂತೆ ನ ಯಯೌ=(ಮುಂದಕ್ಕೆ) ಹೋಗಲೂ ಇಲ್ಲ; ನ ತಸ್ಥೌ=(ಇದ್ದಂತೆಯೇ) ನಿಂತಿರಲೂ ಇಲ್ಲ. [85]

—*S'iva openly declares his love for Pārvatī (86)*—

अद्य प्रभृत्यवनताङ्गि तवास्मि दासः
क्रीतस्तपोभिरिति वादिनि चन्द्रमौलौ ।
अह्नाय सा नियमजं क्लमुत्ससर्ज
क्लेशः फलेन हि पुनर्नवतां विधत्ते ॥ ८६ ॥

"Henceforth, O lady with a stooping frame! I am your slave bought away by your penances."—As the moon-crested S'iva said thus, she at once forgot (shook off) the fatigue produced by her austerities; for, fatigue puts on a freshness once again on (the attainment of) success. [86]

ಅವನತಾಂಗಿ=ಸ್ವಲ್ಪ ಮುಟ್ಟಿಗೆ ಬಗ್ಗಿದ ಶರೀರವುಳ್ಳ ಸುಂದರಿಯೇ! ಅದ್ಯ ಪ್ರಭೃತಿ=ಈ ದಿವಸ ಮೊದಲಾಗಿ ತವ=ನಿನ್ನ ತಪೋಭಿಃ=ತಪಸ್ಸುಗಳಿಂದ ಕ್ರೀತಃ=ಕೊಂಡುಕೊಳ್ಳಲ್ಪಟ್ಟ ದಾಸಃ=ದಾಸನಾಗಿ ಅಸ್ಮಿ=ಇದ್ದೇನೆ. ಇತಿ=ಎಂಬುದಾಗಿ ಚಂದ್ರಮೌಲೌ=ಚಂದ್ರಶೇಖರನು ವಾದಿನಿ=ಹೇಳುತ್ತಿರಲಾಗಿ ಸಾ=ಆ ಪಾರ್ವತಿಯು ಅಹ್ನಾಯ=ತತ್‌ಕ್ಷಣವೇ ನಿಯಮಜಂ=ತಪಶ್ಚರ್ಯೆಯಿಂದಾಗಿದ್ದ ಕ್ಲಮಂ=ಬಳಲಿಕೆಯನ್ನು ಉತ್ಸಸರ್ಜ=ನೀಗಿದಳು. ಕ್ಲೇಶಃ=ಕ್ಲೇಶವು ಫಲೇನ=ಫಲಸಿದ್ಧಿಯಿಂದ ಪುನಃ=ತಿರುಗಿಯೂ ನವತಾಂ=ಹೊಸದಾಗಿರುವಿಕೆಯನ್ನು ವಿಧತ್ತೇ ಹಿ=ಹೊಂದುತ್ತದೆಯಲ್ಲವೇ! [86]

INDEX OF VERSES

(86 Verses in all)

NOTEWORTHY LINES IN THE TEXT

क ईप्सितार्थस्थिरनिश्चयं मनः पयश्च निम्नाभिमुखं प्रतीपयेत् ? 5
  क्लेशः फलेन हि पुनर्नवतां विधत्ते । 86
ते शीलम्.....तपस्विनामप्युपदेशतां गतम् । 36
द्विषन्ति मन्दाश्चरितं महात्मनाम् । 75
न कामवृत्तिर्वचनीयमीक्षते । 82
  न केवलं यो महतोऽपभाषते शृणोति तस्मादपि यः स पापभाक् । 83
  न धर्मवृद्धेषु वयः समीक्ष्यते । 16
  न रत्नमन्विष्यति मृग्यते हि तत् । 45
  न विश्वमूर्तेरवधार्यते वपुः । 78
  न षट्पदश्रेणिभिरेव केवलं सशैवलासङ्गमपि प्रकाशते । 9
  न सन्ति याथार्थ्यविदः पिनाकिनः । 77
पदं सहेत भ्रमरस्य पेलवं शिरीषपुष्पं न पुनः पतत्रिणः । 4
  पापवृत्तये न रूपम् । 36
  प्रियेषु सौभाग्यफला हि चारुता । 1
भवन्ति साम्येऽपि निविष्टचेतसां वपुर्विशेषेष्वतिगौरवाः क्रियाः । 31
मनोरथानामगतिर्न विद्यते । 64
  महाजनः स्मेरमुखो भविष्यति । 70
वद प्रदोषे स्फुटचन्द्रतारका त्रिभावरी यद्यरुणाय कल्पते । 44
शरीरमाद्यं खलु धर्मसाधनम् । 33
  श्मशानशूलस्य न यूपसत्क्रिया । 73
सतां...सङ्गतं मनीषिभिः साप्तपदीनमुच्यते । 39
  सविशेषमद्य मे त्रिवर्गसारः प्रतिभाति । 38

ಕಾ ಳಿ ದಾ ಸ

[ಕಾಲ— ಕ್ರಿ.ಪೂ. ೧ ನೇ ಶತಮಾನ?— ಕ್ರಿ.ಶ. ೫ ನೇ ಶತಮಾನ ?
ಗ್ರಂಥಗಳು :- ಮಹಾಕಾವ್ಯಗಳು ಎರಡು : ರಘುವಂಶ, ಕುಮಾರಸಂಭವ, ಖಂಡ ಕಾವ್ಯಗಳು ಎರಡು : ಮೇಘದೂತ, ಋತುಸಂಹಾರ, ನಾಟಕಗಳು ಮೂರು : ಮಾಳವಿಕಾಗ್ನಿಮಿತ್ರ, ವಿಕ್ರಮೋರ್ವಶೀಯ, ಅಭಿಜ್ಞಾನಶಾಕುಂತಲ]

ಕಾಳಿದಾಸನ ಕಾಲ

ಕಾಳಿದಾಸನು ಶಕಪುರುಷ ವಿಕ್ರಮಾದಿತ್ಯನ ಆಸ್ಥಾನದ [1] ನವಮಣಿಗಳಲ್ಲೊಬ್ಬನೆಂಬುದು ಭಾರತೀಯರಲ್ಲಿ ಪರಂಪರಾಗತವಾದ ಅಭಿಪ್ರಾಯ. ವಿಕ್ರಮಶಕೆಯು ಕ್ರಿ.ಪೂ. ೫೭ ರಲ್ಲಿ ಆರಂಭವಾಯಿತು. ಆದ್ದರಿಂದ ಕಾಳಿದಾಸ ಕ್ರಿ.ಪೂ. ೧ ನೇ ಶತಮಾನದವನೆಂಬುದೇ ಸಾಂಪ್ರದಾಯಿಕ ಮತ. ಅನೇಕ ಆಧುನಿಕ ವಿದ್ವಾಂಸರೂ ಈ ಮತವನ್ನು ಸಮರ್ಥಿಸಿದ್ದಾರೆ. ಕಾಳಿದಾಸನ ವಿಕ್ರಮೋರ್ವಶೀಯ ನಾಟಕದ ಹೆಸರಿನಲ್ಲಿರುವ 'ವಿಕ್ರಮ' ಪದವು ಕಾಳಿದಾಸನ ಆಶ್ರಯದಾತೃವಾದ ವಿಕ್ರಮಾದಿತ್ಯನನ್ನೇ ಸೂಚಿಸುತ್ತದೆಂಬುದರಲ್ಲಿ ಸತ್ಯಾಂಶವಿರಬಹುದಾದರೂ ನಮ್ಮ ದೇಶದ ಚರಿತ್ರೆಯಲ್ಲಿ ಅನೇಕ ವಿಕ್ರಮಾದಿತ್ಯರಿರುವುದು ಸ್ವಲ್ಪ ಹಗರಣಕ್ಕೆ ಕಾರಣವಾಗಿರುವುದರಿಂದ ಈ ಆಧಾರವನ್ನು ಬಿಟ್ಟುಬಿಟ್ಟರೂ ಕಾಳಿದಾಸನನ್ನು ಶಕಪುರುಷ ವಿಕ್ರಮಾದಿತ್ಯನ ಆಸ್ಥಾನದವನಲ್ಲವೆಂದು ನಿರೂಪಿಸುವುದು ಅಸಾಧ್ಯವಾಗಿರುವುದರಿಂದಲೂ, ಕ್ರಿ.ಶ. ೨ ನೆಯ ಶತಮಾನದ ಅಶ್ವಘೋಷನು ಕಾಳಿದಾಸನ ಕಾವ್ಯದಿಂದ ಸ್ಫೂರ್ತಿಪಡೆದಿರುವುದು ಅವನ ಕಾವ್ಯಗಳ ಪರಿಶೀಲನೆಯಿಂದ ತಿಳಿದುಬರುವುದರಿಂದಲೂ, ಶಾಕುಂತಲದಲ್ಲಿ ಬರುವ ಮಕ್ಕಳಿಲ್ಲದವರ ಆಸ್ತಿ ರಾಜ್ಯಕ್ಕೇ ಸೇರತಕ್ಕದ್ದೆಂಬ ನಿಯಮ ಕ್ರಿ.ಶ. ೧ ನೇ ಶತಮಾನಕ್ಕೂ ಹಿಂದೆಯೇ ರೂಢಿಯಲ್ಲಿದ್ದುದರಿಂದಲೂ ಕಾಳಿದಾಸ ಕ್ರಿ.ಪೂ. ೧ ನೇ ಶತಮಾನದವನೆಂಬುದನ್ನು ಸುಲಭವಾಗಿ ಅಲ್ಲಗಳೆಯಲಾಗುವುದಿಲ್ಲ.

ಆದರೆ ಆಧುನಿಕ ವಿದ್ವಾಂಸರಾದ ಡಾ|| ಕೀತ್‌ರವರ ವಾದಸರಣಿಯೇ ಬೇರೆ. ಕಾಳಿದಾಸನು ಉಜ್ಜಯಿನಿಯ ಎರಡನೆಯ ಚಂದ್ರಗುಪ್ತನ ಕಾಲದವ

---

1 ಧನ್ವಂತರಿ- ಕ್ಷಪಣಕ + ಅಮರಸಿಂಹ- ಶಂಕು- ವೇತಾಲಭಟ್ಟ- ಘಟಕರ್ಪರ- ಕಾಳಿದಾಸಾಃ |
ಖ್ಯಾತೋ ವರಾಹಮಿಹಿರೋ ನೃಪತೇಃ ಸಭಾಯಾಂ ರತ್ನಾನಿ ವೈ ವರರುಚಿರ್ನವ ವಿಕ್ರಮಸ್ಯ||

ನೆಂದೂ ಈ ಚಂದ್ರಗುಪ್ತನು ಕ್ರಿ.ಶ. ೩೯೫ ರಲ್ಲಿ ಶಕರನ್ನು ಜಯಿಸಿ ವಿಕ್ರಮಾದಿತ್ಯ ಎಂಬ ಬಿರುದನ್ನು ಪಡೆದಿದ್ದನೆಂದೂ ವಿಕ್ರಮೋರ್ವಶೀಯ ನಾಟಕದ ಹೆಸರಿನಲ್ಲಿನ 'ವಿಕ್ರಮ'ನು ಈ ಚಂದ್ರಗುಪ್ತ 'ವಿಕ್ರಮಾದಿತ್ಯ'ನೇ ಎಂದೂ ಈ ರಾಜನಿಗೆ ಕುಮಾರಗುಪ್ತನೆಂಬ ಕುಮಾರನು ಜನಿಸಿದುದನ್ನೇ ಅಧಿಕರಿಸಿ ಕುಮಾರಸಂಭವ ರಚಿತವಾಗಿರಬೇಕೆಂದೂ ಈ ಕಾರಣಗಳಿಂದ ಕಾಳಿದಾಸನು ಕ್ರಿ.ಶ. ೪೦೦ ಕ್ಕಿಂತ ಈಚಿನವನೆಂದೂ ಡಾ|| ಕೀತ್‌ರವರು ಅಭಿಪ್ರಾಯ ಪಡುತ್ತಾರೆ. ಈ ಅಭಿಪ್ರಾಯಕ್ಕೆ ಬಹುಜನರ ಸಮ್ಮತಿಯಿದೆ. ಕಾಳಿದಾಸನ ರಘುವಂಶದ ೪ನೇ ಸರ್ಗದಲ್ಲಿ ರಘುವು ಹೂಣರನ್ನು ಜಯಿಸಿದಂತೆ ಉಕ್ತ ವಾಗಿದೆ. ಹೂಣರು ಭಾರತಕ್ಕೆ ಮೊಟ್ಟಮೊದಲು ಬಂದುದು ಸುಮಾರು ಕ್ರಿ.ಶ. ೪೫೦ ರಲ್ಲಿ. ಗುಪ್ತರ ಕಾಲದಲ್ಲಿ ಆದ ಹೂಣರ ಸೋಲನ್ನೇ ಕಾಳಿದಾಸನು ಇಲ್ಲಿ ಪರ್ಯಾಯವಾಗಿ ವರ್ಣಿಸಿದ್ದಾನೆಂದು ರಘುದಿಗ್ವಿಜಯ ಮತ್ತು ಅಶ್ವಮೇಧದ ಆಧಾರದಮೇಲೆ ಹೇಳಿದರೆ, ಸಮುದ್ರಗುಪ್ತನನ್ನೇ ರಘುವನ್ನಾಗಿಯೂ, ಅವನ ತಂದೆಯಾದ ೧ನೆಯ ಚಂದ್ರಗುಪ್ತನನ್ನೇ ದಿಲೀಪನನ್ನಾಗಿಯೂ, ಮಗನಾದ ೨ನೆಯ ಚಂದ್ರಗುಪ್ತ (ವಿಕ್ರಮಾದಿತ್ಯ) ನನ್ನೇ ಅಜನನ್ನಾಗಿಯೂ ಇಟ್ಟುಕೊಂಡು ಕಾವ್ಯರಚಿಸಿದ್ದಾನೆಂದೂ ಸಾಮಾನ್ಯವಾಗಿ ಹೇಳಲಾಗುತ್ತಿದೆ. ಮೇಲೆ ಹೇಳಿರುವ ಹೂಣರ ಸೋಲು ಭಾರತದ ವಾಯುವ್ಯ ಸರಹದ್ದಿನಲ್ಲಾದಂತೆ ವರ್ಣಿತವಾಗಿರುವುದರಿಂದ ಇದು ಕ್ರಿ. ಶ. ೪೫೫ ಕ್ಕೂ ಹಿಂದೆಯೇ ಆಗಿರಬೇಕು. ವತ್ಸಭಟ್ಟಿ ಮತ್ತು ಬುದ್ಧಗಯಾ ಶಾಸನಗಳ ದೃಷ್ಟಿಯಿಂದಲೂ ಹೂಣರನ್ನು ಜಯಿಸಿದ ಉಲ್ಲೇಖದ ಅಂತಃಪ್ರಮಾಣದಿಂದಲೂ ಕಾಳಿದಾಸ ೨ನೆಯ ಚಂದ್ರಗುಪ್ತ (ವಿಕ್ರಮಾದಿತ್ಯ)ನ (ಕ್ರಿ.ಶ. ೨೭೫ ರಿಂದ ೪೩೦) ಕಾಲದವನೆಂದು ಹೇಳಬೇಕಾಗುತ್ತದೆ.

ಇದಲ್ಲದೆ ಮಾಳವಿಕಾಗ್ನಿಮಿತ್ರ ನಾಟಕವು ಶುಂಗವಂಶದ ಅಗ್ನಿಮಿತ್ರನನ್ನೇ ನಾಯಕನನ್ನಾಗಿಟ್ಟು ರಚಿತವಾಗಿರುವುದರಿಂದಲೂ, ಅದೇ ನಾಟಕದ ಭರತವಾಕ್ಯದಲ್ಲಿ ಅಗ್ನಿಮಿತ್ರನ ಉಲ್ಲೇಖವಿರುವುದರಿಂದಲೂ ಮತ್ತು ಪುಷ್ಯಮಿತ್ರನ ಅಶ್ವಮೇಧಯಾಗದ ಪ್ರಸ್ತಾಪವೂ ಆ ನಾಟಕದಲ್ಲಿ ಬರುವುದರಿಂದಲೂ ಕಾಳಿದಾಸನು ಶುಂಗವಂಶದ ಅಗ್ನಿಮಿತ್ರನ (ಕ್ರಿ.ಪೂ. ೨ನೆಯ ಶತಮಾನ) ಸಮಕಾಲೀನನೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ವಾದವನ್ನು ಅಂಗೀಕರಿಸಲು ಆಧಾರಗಳು ಸಾಲದು. ಕಾಳಿದಾಸ ವಿಕ್ರಮಾದಿತ್ಯನ

ಆಸ್ಥಾನದ ನವಮಣಿಗಳಲ್ಲೊಬ್ಬ ಎಂಬ ಪರಂಪರಾಗತವೂ ರೂಢಮೂಲವೂ ಆದ ನಂಬಿಕೆಯೂ ಇದಕ್ಕೆ ಪ್ರತಿಬಂಧಕವಾಗಿದೆ. ಆದ್ದರಿಂದ ಪ್ರಾಯಃ ಕಾಳಿದಾಸನು ಕ್ರಿ.ಪೂ. ೧ ನೇ ಶತಮಾನಕ್ಕಿಂತ ಹಿಂದಿನವನಲ್ಲ. ಅವನು ಕ್ರಿ.ಪೂ. ೧ ನೇ ಶತಮಾನದವನೇ ಎಂದಾಗಲಿ ಕೀತ್‌ರವರು ಹೇಳುವಂತೆ ಕ್ರಿ.ಶ. ೪೦೦ ಕ್ಕಿಂತ ಈಚಿನವನೆಂದಾಗಲೀ ಸಿದ್ಧಾಂತಮಾಡುವ ಹಾಗೂ ಇಲ್ಲ. ಆದರೆ ಬುದ್ಧಗಯಾ (ಕ್ರಿ.ಶ. ೪೭೨) ಮತ್ತು ಐಹೊಳೆ (ಕ್ರಿ.ಶ. ೬೩೪) ಶಾಸನಗಳಲ್ಲಿ ಕಾಳಿದಾಸನ ಹೆಸರಿನ ಸ್ಪಷ್ಟಉಲ್ಲೇಖವಿರುವುದರಿಂದಲೂ ಬಾಣನು (ಕ್ರಿ.ಶ. ೬೦೦) ತನ್ನ ಹರ್ಷಚರಿತೆಯ ಪ್ರಾರಂಭಿಕ ಶ್ಲೋಕ ೧೬ ರಲ್ಲಿ[2] ಕಾಳಿದಾಸನನ್ನು ಪ್ರಶಂಸಿಸಿರುವುದರಿಂದಲೂ ಕಾಳಿದಾಸನ ಕಾಲ ಕ್ರಿ.ಪೂ. ೫೬ ರಿಂದ ಈಚೆಗೆ ಮತ್ತು ಕ್ರಿ.ಶ. ೫ ನೇ ಶತಮಾನಕ್ಕೆ ಹಿಂದೆ ಎಂದು ಸ್ಥೂಲವಾಗಿ ಹೇಳುವುದು ತಪ್ಪಾಗಲಾರದು,

ಕಾಳಿದಾಸನ ಜೀವನ

ಕಾಳಿದಾಸನ ಜೀವನದ ವಿಚಾರವಾಗಿ ಅನೇಕ ಕಥೆಗಳು ಹುಟ್ಟಿಕೊಂಡಿವೆ. ಅವುಗಳಲ್ಲಿ ಕೆಲವಂತು ಐತಿಹಾಸಿಕ ಸೋಗಿನಲ್ಲಿವೆ. ಕಾಳಿದಾಸನು ಸಿಂಹಳದ ಕುಮಾರದಾಸನ (ಕ್ರಿ.ಶ. ೫೦೦) ಆಸ್ಥಾನದಲ್ಲಿದ್ದನೆಂಬುದೂ, ಕಾಶ್ಮೀರದ ಮಾತೃಗುಪ್ತರಾಜನೇ (ಕ್ರಿ.ಶ. ೩೦೦) ಅವನೆಂಬುದೂ, ಧಾರಾನಗರದ ಭೋಜರಾಜನ (ಕ್ರಿ.ಶ. ೧೦೦೫–೧೦೫೪) ಆಸ್ಥಾನ ಕವಿಯಾಗಿದ್ದನೆಂಬುದೂ ಉಲ್ಲೇಖನೀಯವಾದ ಚಾರಿತ್ರಿಕ ಸೋಗಿನ ಸತ್ಯ ದೂರವಾದ ಕಥೆಗಳು. ಅವನ ಕಾಳಿ-ದಾಸ ಎಂಬ ಹೆಸರನ್ನು ಸಮರ್ಥಿಸುವ[3] ಕಥೆಗಳಂತು ಹೇರಳವಾಗಿವೆ.

---

[2] ನಿರ್ಗತಾಸು ನ ವಾ ಕಸ್ಯ ಕಾಳಿದಾಸಸ್ಯ ಸೂಕ್ತಿಷು ।
ಪ್ರೀತಿರ್ಮಧುರಸಾದ್ರ್ರಾಸು ಮಂಜರೀಷ್ವಿವ ಜಾಯತೇ ॥

[3] ಕಾಳಿದಾಸನು ಮೊದಲು ಒಬ್ಬ ಶುಂಠನಾಗಿದ್ದನೆಂದೂ, ಕಾರಣಾಂತರಗಳಿಂದ ರಾಜಕುಮಾರಿಯೊಬ್ಬಳನ್ನು ವಿವಾಹವಾದನೆಂದೂ, ಅವನ ಅಜ್ಞತೆಯನ್ನು ಮನಗಂಡ ಆ ರಾಜಕುಮಾರಿಯು ಅವನು ವಿದ್ಯಾವಂತನಾಗುವವರೆಗೆ ಅವನೊಡನೆ ಸಂಸಾರಮಾಡಲೊಪ್ಪದಿರಲು, ಅವನು 'ಕಾಳಿ'ಯನ್ನು ಭಜಿಸಿ ಅವಳ ವರಪ್ರಸಾದದಿಂದ ವರಕವಿಯಾಗಿ ಹೆಂಡತಿಯಲ್ಲಿಗೆ ಹಿಂದಿರುಗಿ ಬರಲು ಅವಳು ಅವನನ್ನು 'ಅಸ್ತಿ ಕಶ್ಚಿತ್ ವಾಗರ್ಥಃ?' ಎಂದು ಕೇಳಿದಳೆಂದೂ ಆದಕ್ಕೆ ಉತ್ತರವಾಗಿ ಅದೇ ವಾಕ್ಯವನ್ನೇ ಹೇಳಿ, ಬಳಿಕ ಆ ಪದಗಳಿಂದ ಕ್ರಮವಾಗಿ ಆರಂಭವಾಗುವ ಕುಮಾರಸಂಭವ, ಮೇಘದೂತ, ರಘುವಂಶ ಕಾವ್ಯಗಳನ್ನು ಕಾಳಿದಾಸನೆಂಬ ಹೆಸರಿನಿಂದ ರಚಿಸಿದನೆಂದೂ ಒಂದು ಕಥೆಯಿದೆ. ಈ ಕಥೆಯಲ್ಲಿ

ಕಾಳಿದಾಸನು ಕಾಶ್ಮೀರದವನೆಂದೂ, ಬಂಗಾಳದವನೆಂದೂ, ಮಾಳವ ದೇಶದವನೆಂದೂ ಸಕಾರಣವಾಗಿ ವಾದಿಸುವವರಿದ್ದಾರೆ. ಕಾಳಿದಾಸನು ಉಜ್ಜಯಿನಿಯಲ್ಲೇ ವಾಸವಾಗಿದ್ದನೆಂದೂ ಭಾರತ ದೇಶದ ಎಲ್ಲ ಭಾಗಗಳಲ್ಲೂ ವಿಶೇಷವಾಗಿ ಸಂಚರಿಸಿದ್ದನೆಂದೂ ಅವನ ಕಾವ್ಯನಾಟಕಗಳಲ್ಲಿನ ಅಂತಃ ಪ್ರಮಾಣಗಳ ಆಧಾರದ ಮೇಲೆ ಒಂದು ಬಗೆಯಾಗಿ ಸಿದ್ಧಾಂತವಾಗಿದೆ ಯೆನ್ನಬಹುದು. ಅವನಿಗೆ ಎಲ್ಲ ಶಾಸ್ತ್ರಗಳ ಪರಿಚಯವಿದ್ದಿತೆಂಬುದು ಅವನ ಗ್ರಂಥಗಳಿಂದಲೇ ಸ್ಪಷ್ಟವಾಗುತ್ತದೆ.

ಕಾಳಿದಾಸನ ವೈಶಿಷ್ಟ್ಯ

ಕವಿಪ್ರತಿಭೆ, ರಚನಾಸೌಂದರ್ಯ ಎರಡೂ ಕೂಡಿ ಬಂದಿರುವುದು ಕಾಳಿ ದಾಸನ ಕಾವ್ಯಗಳಲ್ಲಿ ಮಾತ್ರ. ಇತರ ಕವಿಗಳ ಕಾವ್ಯಗಳಲ್ಲಿ ಒಂದಿದ್ದರೆ ಒಂದಿಲ್ಲ. ಕಾಳಿದಾಸನ ಇನ್ನೊಂದು ಶಕ್ತಿಯೆಂದರೆ ಬಾಹ್ಯಪ್ರಕೃತಿ ವರ್ಣನೆ ಯೊಂದಿಗೇ ಮಾನವನ ಆಂತರಿಕ ಭಾವೋದ್ವೇಗಗಳನ್ನೂ ಚಿತ್ರಿಸುವುದ ರಲ್ಲಿರುವ ಕೌಶಲ. ಬೆಟ್ಟಗುಡ್ಡಗಳ, ಮರಗಿಡಬಳ್ಳಿಗಳ ಮೂಕಭಾಷೆಯನ್ನೂ ಅರ್ಥಮಾಡಿಕೊಳ್ಳುವ ಸಾಮರ್ಥ್ಯವಿದ್ದ ಪ್ರಾಚೀನಕವಿ, ವಾಲ್ಮೀಕಿಯನ್ನು ಬಿಟ್ಟರೆ, ಕಾಳಿದಾಸನೇ ಎಂಬುದರಲ್ಲಿ ಸಂದೇಹವಿಲ್ಲ. ಕಾವ್ಯಗಳನ್ನು ಸಂಪ್ರ ದಾಯಬದ್ಧವಾದ ರೀತಿಯಲ್ಲೇ ಕಾಳಿದಾಸ ರಚಿಸಿದ್ದರೂ, ಸಾಮಾನ್ಯವಾಗಿ ಇತರರಲ್ಲಿ ಕಂಡುಬರುವ ಶಬ್ದಾಡಂಬರ, ಚಮತ್ಕಾರ, (ಚಿತ್ರ) ಬಂಧ ಮುಂತಾದ ಅತಿರೇಕಗಳಾಗಲಿ, ಅತಿಯಾದ ವರ್ಣನೆಯಾಗಲಿ, ಅತಿಯಾದ ಉತ್ಪ್ರೇಕ್ಷೆ, ಶ್ಲೇಷೆ ಮುಂತಾದುವಾಗಲಿ ಅವನಲ್ಲಿಲ್ಲ. ರಸಭಾವಗಳು ಸಹಜ ವಾಗಿಯೇ ಮೂಡಿಬರಲನುಕೂಲವಾದ ಮಧುರವಾದ ಲಲಿತವಾದ ಭಾಷೆ ಯಲ್ಲಿ, ಸರಳವಾದ ಶೈಲಿಯಲ್ಲಿ, ಕಾವ್ಯ ನಾಟಕ ರಚಿಸುವ ಅಪೂರ್ವಶಕ್ತಿ ಕಾಳಿದಾಸನೊಬ್ಬನದೇ ಎಂದು ಧಾರಾಳವಾಗಿ ಹೇಳಬಹುದು.

ಸತ್ಯಾಂಶವೆಷ್ಟೆಂಬುದನ್ನು ಹೇಳಲಾಗುವುದಿಲ್ಲ. ಅವನು ಉಜ್ಜಯಿನಿಯ ಮಹಾಕಾಲನನ್ನು ಆರಾಧಿಸಿ ಅವನ ಅನುಗ್ರಹದಿಂದ ಬೇಗ ವಿದ್ಯಾಭ್ಯಾಸ ಮುಗಿಸಿ ಕಾಲ-ದಾಸನಾಗಿ ಹಿಂದಿರುಗಿ ಕಾವ್ಯ ನಾಟಕಾದಿಗಳ ರಚನೆ ಮಾಡಿದನೆಂದರೆ ಸಮಂಜಸವಾದೀತು. ಮೇಘ ಸಂದೇಶದಲ್ಲಿ ಮಹಾಕಾಲನನ್ನು ಅತ ಅತಿಶಯವಾಗಿ ಕೊಂಡಾಡಿದ್ದಾನೆ. ಪ್ರಾಯಃ 'ಕಾಲದಾಸ'ನೆಂಬ ಹೆಸರು, (ಮಹಾ)ಕಾಲನ ಹೆಸರು ಅಷ್ಟು ಪ್ರಸಿದ್ಧವಾಗಿಲ್ಲವಾದ ಕಾರಣ, ಕಾಲಕ್ರಮದಲ್ಲಿ 'ಕಾಳಿ-ದಾಸ'ನಾಗಿ ಮಾರ್ಪಟ್ಟಿದ್ದರೂ ಇರಬಹುದು. (ನಮ್ಮ ಆಂಗ್ಲ ವಿಕ್ರಮೋರ್ವಶೀಯ ನಾಟಕದ ಪೀಠಿಕೆ ಪು. ೨೯ ನೋಡಿ).

ಕಾಳಿದಾಸನು ತನ್ನ ಕಾವ್ಯಗಳಿಗೆ ಮತ್ತು ನಾಟಕಗಳಿಗೆ ಅಳವಡಿಸಿ ಕೊಂಡಿರುವ ವಸ್ತುಗಳಲ್ಲೂ ಒಂದು ವೈಶಿಷ್ಟ್ಯವನ್ನು ನಾವು ಕಾಣಬಹುದು. ಕುಮಾರಸಂಭವದಲ್ಲಿ ದಿವ್ಯದಂಪತಿಗಳಾದ ಪಾರ್ವತೀಪರಮೇಶ್ವರರ ಆದರ್ಶ ಪ್ರೇಮವನ್ನು, ಪರಸ್ಪರ ಬಯಸಿ ತಪಶ್ಚರ್ಯೆಮಾಡಿ ದಾಂಪತ್ಯಭಾವದಿಂದ ಒಂದಾದುದನ್ನು, ಕಾವ್ಯಾತ್ಮಕವಾಗಿ ಕವಿಯು ನಿರೂಪಿಸಿರುವುದಲ್ಲದೆ ಹಿಮವತ್ ಪರ್ವತದ ಸುಂದರವೂ ವಾಸ್ತವವೂ ಆದ ವರ್ಣನೆಯನ್ನು ಮಾಡಿ ನಮ್ಮ ಅಖಂಡ ಭಾರತದೇಶದ ಉತ್ತರದ ಗಡಿಯ ಪ್ರಾಚೀನತೆಯನ್ನು ಯಾರೂ ಶಂಕಿಸದ ರೀತಿಯಲ್ಲಿ ಬರೆದಿಟ್ಟಿದ್ದಾನೆ. ರಘುವಂಶದಲ್ಲಿ ಸೂರ್ಯವಂಶದ ರಾಜರ ಚರಿತ್ರೆ ಯನ್ನು ಚಿತ್ರಿಸಿರುವುದಲ್ಲದೆ ಭರತಖಂಡದ ಎಲ್ಲ ಪ್ರಾಂತ್ಯಗಳನ್ನೂ ರಘುವಿನ ದಿಗ್ವಿಜಯದ ಪ್ರಕರಣದಲ್ಲಿ ಯಥಾವತ್ತಾಗಿ ವಿವರಿಸಿ, ಇಂದುಮತೀಸ್ವಯಂವರ ಪ್ರಕರಣದಲ್ಲಿ ಭಾರತಭೂಮಿಯ ವಿವಿಧ ಪ್ರಾಂತಗಳ ರಾಜರನ್ನು ಸ್ವಯಂವರ ವ್ಯಾಜದಲ್ಲಿ ಒಟ್ಟಿಗೆ ಕಲೆಹಾಕಿ ಭಾರತದ ಅಖಂಡತ್ವ ಎಷ್ಟು ಹಿಂದಿನ ಕಾಲ ದ್ದೆಂಬುದನ್ನು ತೋರಿಸಿದ್ದಾನೆ. ಮೇಘಸಂದೇಶದಲ್ಲಿ ಭಾರತದ ದಕ್ಷಿಣದ ರಾಮಗಿರಿಯಿಂದ ಉತ್ತರದ ಅಲಕಾವತಿಯ ವರೆಗಿನ ಪ್ರಮುಖವಾದ ಪ್ರದೇಶ ಗಳನ್ನು ವರ್ಣಿಸಿ ರಾಷ್ಟ್ರೈಕ್ಯತೆಯ ಸ್ವರೂಪದ ದಿಗ್ದರ್ಶನ ಮಾಡಿಕೊಟ್ಟಿದ್ದಾನೆ. ಮಾಳವಿಕಾಗ್ನಿಮಿತ್ರದಲ್ಲಿ ಐತಿಹಾಸಿಕ ಪ್ರಸಿದ್ಧಿಗಳಿಸಿದ ತನ್ನ ಕಾಲದ ಅಗ್ನಿ ಮಿತ್ರರಾಜನ ಗೃಹಕೃತ್ಯದ ಕಥೆಯನ್ನೇ ನಿರೂಪಿಸಹೊರಟಿದ್ದರೂ ಆಗಿನ ಧಾರ್ಮಿಕ ಮತ್ತು ರಾಜಕೀಯ ಪರಿಸ್ಥಿತಿಯ ಸ್ಪಷ್ಟಸೂಚನೆಯಿತ್ತಿದ್ದಾನೆ. ವಿಕ್ರಮೋರ್ವಶೀಯವಂತು ಚಂದ್ರವಂಶದ ಪ್ರಪ್ರಥಮ ರಾಜನಾದ ಪುರೂರವನ ಕಥೆ;—ಅವನ ಮಗ 'ಆಯು'ವಿನ ವೈಶಿಷ್ಟ್ಯಪೂರ್ಣ ಜನನ ಮತ್ತು ಬಾಲ್ಯದ ಕಥೆ. ಶಾಕುಂತಲದ ವಸ್ತು ನಮ್ಮ ದೇಶಕ್ಕೆ 'ಭಾರತ' 'ಭರತಖಂಡ' ಎಂಬ ಹೆಸರು ಬರಲು ಕಾರಣನಾದ, ಮೊದಲು ಸರ್ವದಮನನೆಂದು ಕರೆಯಲ್ಪಟ್ಟಿದ್ದು ಬಳಿಕ 'ಭರತ'ನೆಂದು ಪ್ರಸಿದ್ಧನಾದ ಪ್ರಪ್ರಥಮ 'ಸಾರ್ವಭೌಮ'ನ ಜನ್ಮ ವೃತ್ತಾಂತ. ಈ ಅಂಶಗಳನ್ನು ಪರಿಶೀಲಿಸಿದರೆ, ಈ ಕಾವ್ಯನಾಟಕಗಳ ರಸಪರಿಪೋಷ ಹಾಗಿರಲಿ, ಅವುಗಳಿಗೆಲ್ಲ ಆಧಾರವಾಗಿ ರಾಷ್ಟ್ರಪ್ರೇಮ ಪ್ರೇರಿತನಾಗಿ ಕಾಳಿದಾಸನು ಆರಿಸಿಕೊಂಡಿರುವ ವಸ್ತುಗಳೂ ಸರ್ವಶ್ಲಾಘ್ಯ ವೆನ್ನುವುದರಲ್ಲಿ ಸಂದೇಹವಿಲ್ಲ.

ಕುಮಾರಸಂಭವ

ಕುಮಾರಸಂಭವ ಮಹಾಕಾವ್ಯವು ೧೭ ಸರ್ಗಗಳಲ್ಲಿ ಪ್ರಚಲಿತವಾಗಿದ್ದರೂ ಅದರ ಮೊದಲ ಏಳು ಸರ್ಗಗಳು ಮಾತ್ರ ಕಾಳಿದಾಸರಚಿತವೆಂದು ಹೇಳಲಾಗುತ್ತಿದೆ. ಮಲ್ಲಿನಾಥನೂ ಈ ಏಳು ಸರ್ಗಗಳಿಗೆ ಮಾತ್ರ ವ್ಯಾಖ್ಯಾನ ಬರೆದಿದ್ದಾನೆ. ಆದರೆ, ವಾಮನನು ಎಂಟನೆಯ ಸರ್ಗದಿಂದ ಉದಹರಿಸಿರುವುದರಿಂದ ಅದೂ ಕಾಳಿದಾಸರಚಿತವೇ ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಕಾವ್ಯದ ಹೆಸರೇ ಸೂಚಿಸುವಂತೆ, ಅದು ಕುಮಾರಸ್ವಾಮಿಯ ಜನನವನ್ನು ಕುರಿತು ರಚಿತವಾದುದು. ಮೊದಲ ಏಳು ಸರ್ಗಗಳು ಕುಮಾರನ ಮಾತಾಪಿತೃಗಳಾದ ಪಾರ್ವತೀ-ಶಿವರ ವಿವಾಹಕ್ಕೆ ಅವಕಾಶವೇರ್ಪಟ್ಟ ಸನ್ನಿವೇಶಗಳನ್ನು ಚಿತ್ರಿಸುತ್ತವೆ. ಮುಂದಿನ ಸರ್ಗಗಳಲ್ಲಿ ಅಶ್ಲೀಲ ಶೃಂಗಾರ ವಿಶೇಷವಾಗಿ ಕಂಡುಬರುವುದರಿಂದ ಅವು ಅಷ್ಟು ಪ್ರಸಿದ್ಧವಾಗಿಲ್ಲ. ಮೊದಲಿನಿಂದ ಕೊನೆಯವರೆಗೂ ವರ್ಣನೆ ಉತ್ಕೃಷ್ಟವಾದ ರೀತಿಯಲ್ಲಿದೆ. ಕುಮಾರನಿಂದಾದ ತಾರಕಾಸುರ ವಧೆಯಲ್ಲಿ ಕಾವ್ಯ ಉಪಸಂಹೃತವಾಗುತ್ತದೆ.

ಪಾರ್ವತಿಯ ತಪಸ್ಸು

ಹಿಮವಂತನ ಮಗಳಾದ ಪಾರ್ವತಿಗೆ ಶಿವನನ್ನೇ ವರಿಸಬೇಕೆಂಬ ಉತ್ಕಟೇಚ್ಛೆ ಬಾಲ್ಯದಿಂದಲೂ ಬೆಳೆದು ಬಂದಿತ್ತು. ಶಿವನೇ ಪಾರ್ವತಿಗೆ ತಕ್ಕ ವರ ಎಂಬುದರಲ್ಲಿ ಹಿಮವಂತನಿಗೂ ಸಂಶಯವೇ ಇರಲಿಲ್ಲ. ಪಾರ್ವತಿ ಪ್ರಾಪ್ತವಯಸ್ಕಳಾದಳು. ಶಿವನಾದರೋ ಹಿಮಾಲಯದ ಒಂದು ಶಿಖರದ ಮೇಲೆ ತಪಶ್ಚರ್ಯೆಯಲ್ಲಿದ್ದ. ಆದ್ದರಿಂದ ಹಿಮವಂತನೇ ಪಾರ್ವತಿಯನ್ನು ಅವಳ ಇಬ್ಬರು ಸಖಿಯರೊಡನೆ ಶಿವನ ಶುಶ್ರೂಷೆಗೆಂದು ಶಿವನಲ್ಲಿಗೆ ಕಳುಹಿಸಿದ. ಪಾರ್ವತಿ ಸಂತೋಷದಿಂದಲೇ ಶಿವನ ಸೇವೆಮಾಡುತ್ತಾ, ಎಂದಾದರೊಂದು ದಿನ ತನ್ನ ರೂಪರಾಶಿಗೆ ಶಿವನು ಬೆರಗಾಗಿ ತನ್ನನ್ನು ಮೋಹಿಸಬಹುದೆಂಬ ನಿರೀಕ್ಷೆಯಿಂದಿದ್ದಳು. ಒಂದು ದಿನ ಪಾರ್ವತಿಯ ಮೇಲೆ ಶಿವನ ದೃಷ್ಟಿ ಬೀಳುವುದಕ್ಕೆ ಸರಿಯಾಗಿ ಮನ್ಮಥನೂ ಶಿವನ ಮೇಲೆ ಸಂಮೋಹನಾಸ್ತ್ರ ಪ್ರಯೋಗಮಾಡುವುದರಲ್ಲಿದ್ದ. ಶಿವನ ಮನಸ್ಸೂ ಸ್ವಲ್ಪ ಮಟ್ಟಿಗೆ ಚಂಚಲವಾಯಿತು. ಆದರೆ ಅಷ್ಟರಲ್ಲೇ ಶಿವನು ತನ್ನ ಮೂರನೆಯ ಕಣ್ಣಿನ ಜ್ವಾಲೆಯಿಂದ ಮನ್ಮಥನನ್ನು

ಸುಟ್ಟುಬಿಟ್ಟು ಆ ಸ್ಥಳವನ್ನೇ ತ್ಯಜಿಸಿ ಬೇರೆಲ್ಲಿಗೋ ಹೊರಟುಹೋದ. ಪಾರ್ವತಿ ಇದೆಲ್ಲವನ್ನೂ ಪ್ರತ್ಯಕ್ಷವಾಗಿಯೇ ಕಂಡಿದ್ದಳು. ತನ್ನ ರೂಪ ಶಿವನ ಮೇಲೆ ಯಾವ ಪರಿಣಾಮವನ್ನೂ ಮಾಡಲಿಲ್ಲವೆಂಬುದನ್ನು ಕಂಡು ಆಶಾಭಂಗ ಹೊಂದಿ ಶಿವನ ಆ ಆಶ್ರಮದಿಂದ ತನ್ನ ತಂದೆಯ ಮನೆಗೇ ಬಂದುಬಿಟ್ಟಿದ್ದಳು.

ತಂದೆಯ ಮನೆಯಲ್ಲಿ ಪಾರ್ವತಿಯ ಮನಸ್ಸಿಗೆ ನೆಮ್ಮದಿಯುಂಟಾಗಲಿಲ್ಲ. ಶಿವನನ್ನು ವರಿಸಬೇಕಾದರೆ ಮಾರ್ಗ ಯಾವುದು? ಮೃತ್ಯುಂಜಯನೂ ಸರ್ವ ಮಂಗಳಕರನೂ ಆದ ಶಿವನನ್ನು ಪತಿಯಾಗಿ ಪಡೆಯುವ ಭಾಗ್ಯ ಸಾಮಾನ್ಯ ವಾದ ಉಪಾಯಗಳಿಂದ ಸಾಧ್ಯವೇ? ತನ್ನ ಮೊದಲ ಹೆಂಡತಿಯಾಗಿದ್ದ ಸತಿಯ ಮರಣಾನಂತರ ನಿರ್ವೇದದಿಂದ ಬೇರೆ ಯಾವಳನ್ನೂ ಮದುವೆಯಾಗದೆ ತಪೋನಿರತನಾಗಿದ್ದಂತಹ ಆ ಶಿವನ ಅಸಾಧಾರಣ ಪ್ರೇಮ ತನಗೆ ದೊರಕ ಬೇಕಾದರೆ ಅಸಾಧಾರಣವಾದ ಮಾರ್ಗವನ್ನೇ ಹಿಡಿಯಬೇಕು. ಅಂತಹ ಮಾರ್ಗ ತಪಶ್ಚರ್ಯೆಯೊಂದೇ ಎಂದು ನಿಶ್ಚೈಸಿ, ಪಾರ್ವತಿ ಅದಕ್ಕೆ ಸಿದ್ಧಳಾದಳು. ಅವಳ ತಾಯಿ 'ತಪಸ್ಸು ಕಷ್ಟ, ಅದು ನಿನಗಲ್ಲ; ಬೇಡ' ಎಂದು ಬಗೆ ಬಗೆಯಾಗಿ ಹೇಳಿದರೂ ಪಾರ್ವತಿ ತನ್ನ ನಿಶ್ಚಯವನ್ನು ಬದಲಾಯಿಸಲಿಲ್ಲ. ತನ್ನ ತಂದೆಯ ಅನುಮತಿಯನ್ನು ಪಡೆದು ಹಿಮಾಲಯದ ಶಿಖರವೊಂದಕ್ಕೆ ತೆರಳಿ ಅಲ್ಲಿ ಸುದೀರ್ಘವಾದ ತಪಸ್ಸನ್ನಾಚರಿಸಿ, ಆ ಶಿಖರಕ್ಕೆ ಮುಂದೆ 'ಗೌರೀ ಶಿಖರ' ಎಂಬ ಹೆಸರೇ ನಿಲ್ಲುವಂತೆ ಮಾಡಿದಳು.

ರಾಜಕುಮಾರಿಯಾದ ಪಾರ್ವತಿ,—ಅನೇಕ ಸುಂದರ ವಸ್ತ್ರಾಲಂಕಾರ ಭೂಷಿತಳಾಗಿದ್ದವಳು,—ಈಗ ತಪಶ್ಚರ್ಯೆಗಾಗಿ ಎಲ್ಲವನ್ನೂ ತೊರೆದು ವಲ್ಕಲ ಧಾರಿಣಿಯಾದಳು. ಅವಳಿಗೆ ಅತ್ಯಂತ ಪ್ರಿಯವಾಗಿದ್ದ ಮುಕ್ತಾಹಾರವನ್ನೂ ತೆಗೆದಿಟ್ಟುಬಿಟ್ಟಳು. ತಲೆಗೂದಲನ್ನು ಅಂದವಾಗಿ ಬಾಚಿ ಜಡೆಹಾಕಿ ಸಿಂಗರಿಸಿ ಕೊಳ್ಳುತ್ತಿದ್ದವಳು ಜಟಾಧಾರಿಣಿಯಾದಳು. ಹಿಂದೆ ರತ್ನಖಚಿತವಾದ ಡಾಬನ್ನು ಧರಿಸುತ್ತಿದ್ದ ಸೊಂಟದಲ್ಲಿ ಈಗ ವ್ರತಾಚರಣೆಗಾಗಿ ಒರಟೊರಟಾದ ಮೂರೆಳೆಯ ಮೌಂಜಿಯನ್ನು ಧರಿಸಿದಳು. ಎಳೆಯ ದರ್ಭೆಗಳನ್ನು ಕುಯ್ದು ಗಾಯಗೊಂಡ ಕೈಗಳಲ್ಲಿ ಯಾವಾಗಲೂ ಅಕ್ಷಮಾಲಿಕೆ ಹಿಡಿದಿರುತ್ತಿದ್ದಳು. ಮೆತ್ತನೆಯ ಸುಪ್ಪತ್ತಿಗೆಯ ಮೇಲೆ ಹೊರಳಾಡುವಾಗ ಜಡೆಯಲ್ಲಿ ಮುಡಿದಿದ್ದ ಹೂಗಳು ಬಿದ್ದು ಒತ್ತಿದರೂ ತನ್ನ ಸುಖಶಯನಕ್ಕೆ ಭಂಗ ಬಂದಂತೆ ಭಾವಿಸುತ್ತಿದ್ದ

ಪಾರ್ವತಿ ಈಗ ಬರಿಯ ನೆಲದ ಮೇಲೆಯೇ ಕುಳಿತುಕೊಳ್ಳುತ್ತಲೂ ತನ್ನ ತೋಳಿನ ಮೇಲೆಯೇ ತಲೆಯಿಟ್ಟು ಮಲಗುತ್ತಲೂ ಇದ್ದಳು. ಸಹಜವಾದ ತನ್ನ ವಿಲಾಸಚೇಷ್ಟಿತಗಳನ್ನೂ ಚಂಚಲ ನೋಟವನ್ನೂ ತ್ಯಜಿಸಿ, ಸ್ವಲ್ಪವೂ ಸೋಮಾರಿತನವಿಲ್ಲದೆ ಮಾತೃವಾತ್ಸಲ್ಯದಿಂದ ತನ್ನ ಆಶ್ರಮದ ಎಳೆಯ ಗಿಡಗಳಿಗೆ ಸ್ವಂತವಾಗಿ ನೀರೆರೆಯುತ್ತಲೂ ಜಿಂಕೆಯ ಮರಿಗಳನ್ನು ಪೋಷಿಸುತ್ತಲೂ ಇದ್ದಳು. ನಿತ್ಯವೂ ಅವಗಾಹಸ್ನಾನಮಾಡಿ, ಅಗ್ನಿಕಾರ್ಯಗಳನ್ನಾಚರಿಸಿ, ನಾರು ಮಡಿಯನ್ನೇ ಹೊದೆದು ಅಧ್ಯಯನಶೀಲಳಾಗಿರುತ್ತಿದ್ದಳು. ರಾಜಕುಮಾರಿಯೊಬ್ಬಳ ದಿನಚರಿಯಲ್ಲಿ ಇಷ್ಟು ವ್ಯತ್ಯಾಸವಾಗಿ, ಅವಳು ಸತತವಾಗಿ ನಿಯಮಸ್ಥಳಾಗಿರುವುದು ಸಾಮಾನ್ಯವಾದ ತಪಸ್ಸಲ್ಲ. ಎಳೆಯ ವಯಸ್ಸಿನವಳಾಗಿದ್ದರೂ, ನಿಯಮಾಚರಣೆಯಲ್ಲಿ ವಯೋವೃದ್ಧರನ್ನೂ ಅವಳು ಮೀರಿಸಿದ್ದಳು. ಈ ಸಮಾಚಾರವನ್ನು ಕೇಳಿ ತಿಳಿದ ವೃದ್ಧರಾದ ಎಷ್ಟೋ ಋಷಿಗಳು ಪ್ರತ್ಯಕ್ಷವಾಗಿಯೇ ಪಾರ್ವತಿಯನ್ನು ನೋಡಬೇಕೆಂದು ಆ ಆಶ್ರಮಕ್ಕೇ ಬರಲಾರಂಭಿಸಿದರು. ದೀರ್ಘಕಾಲ ಧರ್ಮಾಚರಣೆ ಸಾಧಿಸಿದವರಲ್ಲಿ, ಅವರ ವಯಸ್ಸೆಷ್ಟೆಂಬ ಪ್ರಶ್ನೆಯೇ ಏಳುವುದಿಲ್ಲ. ಪಾರ್ವತಿಯ ಇಂತಹ ತಪಸ್ಸಿನಿಂದ ಆ ತಪೋವನ ಪಾವನವಾಯಿತು. ಜನ್ಮತಃ ವೈರಿಗಳಾದ ಮೃಗಗಳೂ ವೈರ ಬುದ್ಧಿಯನ್ನು ತ್ಯಜಿಸಿದುವು. ಅತಿಥಿಗಳು ಅನಾಯಾಸವಾಗಿ ವೃಕ್ಷಗಳಿಂದ ದೊರೆತ ಫಲಗಳಿಂದಲೇ ತೃಪ್ತರಾದರು. ಅನೇಕ ತಪಸ್ವಿಗಳೂ ಅಲ್ಲಿಗೆ ಬಂದು ಹೊಸ ಆಶ್ರಮಗಳನ್ನು ಕಟ್ಟಿಕೊಂಡು ಅಲ್ಲಿ ಅಗ್ನಿಕಾರ್ಯಗಳನ್ನಾರಂಭಿಸಿದರು.

ಇಷ್ಟೆಲ್ಲ ಆದರೂ, ಆ ಬಗೆಯ ತಪಸ್ಸಮಾಧಿಯಿಂದ ತನ್ನ ಇಷ್ಟಾರ್ಥ ಕೈಗೂಡಲಾರದೆಂದು ಪಾರ್ವತಿಗೆ ಮನವರಿಕೆಯಾಯಿತು. ಕೂಡಲೇ ತನ್ನ ಶರೀರದ ಮಾರ್ದವವನ್ನೂ ಲೆಕ್ಕಿಸದೆ ಉಗ್ರವಾದ ತಪಶ್ಚರ್ಯೆಯನ್ನಾರಂಭಿಸಿದಳು. ಆಗ ಗ್ರೀಷ್ಮಋತುವಾಗಿತ್ತು. ತನ್ನ ನಾಲ್ಕು ಕಡೆಯೂ ನಾಲ್ಕು ಅಗ್ನಿಗಳನ್ನು ಹುತಮಾಡಿ ಅವು ಜ್ವಲಿಸುತ್ತಿರಲು ಮೇಲೆ ಕಣ್ಣು ಕುಕ್ಕುವ ಉರಿಬಿಸಿಲಿನ ಸೂರ್ಯನನ್ನು ಒಂದೇ ದೃಷ್ಟಿಯಿಂದ ನೋಡುತ್ತಾ 'ಪಂಚಾಗ್ನಿ ತಪಸ್ಸು' ಎಂಬ ಕಠಿಣವ್ರತವನ್ನಾರಂಭಿಸಿದಳು. ಊಟವನ್ನು ಸಂಪೂರ್ಣವಾಗಿ ತ್ಯಜಿಸಿಬಿಟ್ಟಳು. ತಾನಾಗಿ ಮೈಮೇಲೆ ಬಿದ್ದ ಮಳೆ ಹನಿಗಳೂ ಚಂದ್ರಕಿರಣಗಳೂ ಮಾತ್ರ ಅವಳಿಗೆ ಆಹಾರವಾಗಿತ್ತು.

ವರ್ಷಋತು ಪ್ರಾಪ್ತವಾದ ಮೇಲೆ ಪಾರ್ವತಿಯು ರಾತ್ರಿಯಲ್ಲೂ ಸುರಿಯುವ ಮಳೆಯಲ್ಲೇ ಕುಟೀರದ ಹೊರಗಡೆ ಕಲ್ಲುಬಂಡೆಗಳ ಮೇಲೆ ಕುಳಿತಿರುತ್ತಿದ್ದಳು. ವಿಶೇಷವಾಗಿ ಹಿಮ ಸುರಿಯುವ ಹಿಮಂತಋತುವಿನ ರಾತ್ರಿಗಳಲ್ಲೂ ನೀರಿನಲ್ಲೇ ನಿಂತಿರುತ್ತಿದ್ದಳು. ತಾನಾಗಿಯೇ ಉದುರಿದ ಎಲೆಗಳನ್ನು ತಿಂದು ತಪಶ್ಚರ್ಯೆ ಮಾಡುವುದು ತಪಸ್ಸಿನ ಪರಾಕಾಷ್ಠೆ. ಪಾರ್ವತಿ ಅಂತಹ ಎಲೆಗಳನ್ನೂ ತಿನ್ನದೆ 'ಅಪರ್ಣೆ' ಆದಳು. ಅಷ್ಟು ಉಗ್ರವಾದ ನಿಯಮಗಳನ್ನು ಪಾಲಿಸುತ್ತಾ ತಪಸ್ವಿಗಳ ತಪಸ್ಸನ್ನೂ ಮೀರಿಸಿದಳು.

ಏಕಾಗ್ರಚಿತ್ತತೆಯಿಂದ, ವಿಧಿವಿಹಿತವಾದ ನಿಯಮಗಳನ್ನು ಮೀರದೆ, ತಪಸ್ಸನ್ನು ಆಚರಿಸಿದರೆ ಇಷ್ಟಾರ್ಥಸಿದ್ಧಿಯಾಗುವುದರಲ್ಲಿ ಸಂಶಯವೇ ಇಲ್ಲ. ಪಾರ್ವತಿಯ ವ್ರತಾಚರಣೆಯ ಫಲವಾಗಿ ಅವಳ ಅಭೀಷ್ಟ ಸಿದ್ಧಿಸುವ ಸಮಯ ಪ್ರಾಪ್ತವಾಯಿತು. ಯಾವ ಶಿವನನ್ನೇ ಪತಿಯನ್ನಾಗಿ ಪಡೆಯಬೇಕೆಂಬ ಅಭಿನಿವೇಶದಿಂದ ಪಾರ್ವತಿ ತಪಶ್ಚರ್ಯೆಯ ಮಾರ್ಗ ಹಿಡಿದಿದ್ದಳೋ ಅದೇ ಶಿವನು, ಅವಳ ತಪಸ್ಸಿನಿಂದ ಸಂತುಷ್ಟನಾದ; ಜಟಿಲನಾದ ಒಬ್ಬ ಬ್ರಹ್ಮಚಾರಿಯ ರೂಪದಲ್ಲಿ ಕಾಣಿಸಿಕೊಂಡು, ಅವಳ ಮನೋಭಾವವನ್ನು ಸಾಕ್ಷಾತ್ತಾಗಿ ಪರೀಕ್ಷಿಸಿ, ಕೊನೆಯಲ್ಲಿ ತನ್ನ ನಿಜರೂಪದಿಂದ ಅವಳ ಪಾಣಿಗ್ರಹಣ ಮಾಡಿದ.

ಪಾರ್ವತೀ ಜಟಿಲ ಸಂವಾದ

ಪಾರ್ವತಿಯ ತಪಸ್ಸಿನಿಂದ ಶಿವನಿಗೆ ಅಪಾರವಾದ ಸಂತೋಷವಾಯಿತು. ಆದರೂ ಅವಳ ಮನೋಭಾವವನ್ನು ಸಾಕ್ಷಾತ್ತಾಗಿಯೇ ಪರೀಕ್ಷಿಸಬೇಕೆಂಬ ಕುತೂಹಲದಿಂದ ಅವನು ಜಟಿಲನಾದ ಬ್ರಹ್ಮಚಾರಿಯ ವೇಷವನ್ನು ಧರಿಸಿ ಪಾರ್ವತಿಯ ಆಶ್ರಮಕ್ಕೇ ಬಂದ. ಕೈಯಲ್ಲಿ ಪಲಾಶದಂಡ ಹಿಡಿದು, ಕೃಷ್ಣಾಜಿನ ಧಾರಿಯಾಗಿ, ಬ್ರಹ್ಮತೇಜಸ್ಸಿನಿಂದ ಜ್ವಲಿಸುತ್ತಾ ತನ್ನ ಆಶ್ರಮಕ್ಕೆ ಅತಿಥಿಯಾಗಿ ಬಂದ ಆ ಜಟಿಲನನ್ನು ಪಾರ್ವತಿಯು ವಿಧ್ಯುಕ್ತವಾದ ರೀತಿಯಲ್ಲಿ ಸತ್ಕರಿಸಿದಳು. ಜಟಿಲರೂಪಿಯಾದ ಆ ಶಿವನೂ ಪಾರ್ವತಿಯ ಆತಿಥ್ಯವನ್ನು ಸ್ವೀಕರಿಸಿ, ಸ್ವಲ್ಪ ಹೊತ್ತು ಆಯಾಸಪರಿಹಾರಕ್ಕಾಗಿ ವಿಶ್ರಮಿಸಿಕೊಂಡಂತಿದ್ದು, ಅವಳನ್ನೇ ನೋಡುತ್ತಾ ತಪಸ್ವಿಜನಕ್ಕೆ ಯೋಗ್ಯವಾದ ರೀತಿಯಲ್ಲಿ ಅವಳ ಯೋಗಕ್ಷೇಮವನ್ನು ಈ ರೀತಿ ವಿಚಾರಿಸಲಾರಂಭಿಸಿದನು.

'ವ್ರತಾಚರಣೆಗೆ ಬೇಕಾದ ಸಮಿತ್ತೂ ದರ್ಭೆಯೂ ಇಲ್ಲಿ ಸುಲಭವಾಗಿ ದೊರಕುತ್ತದೆಯೇ? ನೀರು ಸ್ನಾನಕ್ಕೆ ಯೋಗ್ಯವಾಗಿದೆಯೇ? ಧರ್ಮಾಚರಣೆಗೆ ಮೊಟ್ಟಮೊದಲು ಬೇಕಾದ ಸಾಧನವೇ ಶರೀರ. ಅದನ್ನು ರಕ್ಷಿಸಿಕೊಳ್ಳಲೇ ಬೇಕು. ಆದ್ದರಿಂದ ತಪಸ್ಸನ್ನು ನಿನ್ನ ಶಕ್ತಿಗೆ ಅನುಗುಣವಾಗಿ ಆಚರಿಸು ತ್ತಿದ್ದೀಯಾ? ನೀನು ಬೆಳೆಯಿಸುತ್ತಿರುವ ಈ ಬಳ್ಳಿಗಳು ಸಕಾಲದಲ್ಲಿ ಚಿಗುರು ತ್ತಿವೆಯೇ?

'ಆಶ್ರಮದ ಜಿಂಕೆಗಳ ವಿಷಯದಲ್ಲಿ ನಿನ್ನ ಮನಸ್ಸು ಪ್ರಸನ್ನವಾಗಿದೆಯೇ? 'ಸುರೂಪವೆಂದಿಗೂ ಪಾಪಾಚರಣೆಗಲ್ಲ' ಎಂಬ ಮಾತು ನಿನ್ನಲ್ಲಿ ಸಾರ್ಥಕವಾಗಿದೆ. ರೂಪಕ್ಕೆ ತಕ್ಕ ಶೀಲದಿಂದ ಕೂಡಿ ನೀನು ತಪಸ್ವಿಗಳಿಗೂ ಆದರ್ಶವಾಗಿದ್ದೀಯೆ. ಸಪ್ತರ್ಷಿಗಳು ಅರ್ಪಿಸಿದ ಪುಷ್ಪೋಪಹಾರಗಳಿಂದ ಕೂಡಿದ ದೇವಗಂಗೆಯ ನೀರು ಅಂತರಿಕ್ಷದಿಂದ ಈ ಹಿಮವತ್ಪರ್ವತದ ಮೇಲೆ ಬಿದ್ದು ಅದನ್ನು ಪವಿತ್ರ ಗೊಳಿಸುತ್ತದೆ, ನಿಜ. ಆದರೆ, ಆದಕ್ಕಿಂತಲೂ ಹೆಚ್ಚಾಗಿ ಪುತ್ರ-ಪೌತ್ರಾದಿ ಗಳೊಡನೆ ಈ ಪರ್ವತ ಪುನೀತವಾಗಿರುವುದು ನಿನ್ನ ಸಚ್ಚರಿತ್ರದಿಂದಲೇ. ಆದ್ದ ರಿಂದಲೇ ಧರ್ಮ ಅರ್ಥ ಕಾಮಗಳೆಂಬ ತ್ರಿವರ್ಗಗಳಲ್ಲಿ ಧರ್ಮವೇ ಸಾರತಮ ವಾದುದೆಂಬುದು ಸ್ಪಷ್ಟವಾಗಿದೆ.

'ನನ್ನನ್ನು ನೀನು ಅನ್ಯನೆಂದು ಭಾವಿಸಕೂಡದು. ಸತ್ಪುರುಷರ ನಡುವೆ ಸಖ್ಯ ಏಳು ಪದಗಳ ಉಚ್ಚಾರಣಮಾತ್ರದಿಂದಲೇ ಉಂಟಾಗತಕ್ಕದ್ದೆಂದು ಬಲ್ಲವರು ಹೇಳುತ್ತಾರೆ. ಅಂತಹ ಸಖ್ಯ ನಮ್ಮಿಬ್ಬರಲ್ಲೂ ಈಗ ಉಂಟಾದಂತೆಯೇ. ಆದ್ದರಿಂದ ಬ್ರಾಹ್ಮಣಸಹಜವಾದ ಚಾಪಲ್ಯದಿಂದ ನಾನು ಕೇಳುವ ಈ ಪ್ರಶ್ನೆಗೆ, ಅದು ಅಂತಹ ರಹಸ್ಯವಲ್ಲದಿದ್ದರೆ, ನೀನು ಉತ್ತರ ಹೇಳಬೇಕು.

'ನೀನು ಹುಟ್ಟಿರುವುದು ಮೊದಲನೆಯ ಬ್ರಹ್ಮನಾದ ಹಿರಣ್ಯಗರ್ಭನ ಕುಲ ದಲ್ಲಿ. ಮೂರು ಲೋಕಗಳ ಸೌಂದರ್ಯವೂ ಒಟ್ಟಿಗೇ ಜನ್ಮ ತಾಳಿದಂತಿದೆ ನಿನ್ನ ಶರೀರದಲ್ಲಿ. ಐಶ್ವರ್ಯದಿಂದ ದೊರಕಬಹುದಾದ ಸುಖಗಳಲ್ಲಿ ಯಾವುದರ ಕೊರತೆಯೂ ನಿನಗಿಲ್ಲ. ಹೊಸ ಪ್ರಾಯವೂ ಇದೆ. ತಪಸ್ಸಿನಿಂದ ಪಡೆಯಬಹು ದಾದ ಫಲ ಇದೆಲ್ಲಕ್ಕಿಂತ ಬೇರೆ ಯಾವುದು? ದುಃಸಹವಾದ ಅನಿಷ್ಟ ಸಂಭವಿಸಿ ದಾಗಲೂ ಮಾನಿಷ್ಠರಾದ ಸ್ತ್ರೀಯರು ಇಂತಹ ಉದ್ಯೋಗದಲ್ಲಿ ತೊಡಗು ವುದುಂಟು. ಆದರೆ ಅಂತಹ ಯಾವುದಕ್ಕೂ ನಿನ್ನಲ್ಲಿ ಅವಕಾಶವೇ ಇಲ್ಲ.

ತಂದೆಯ ಮನೆಯಲ್ಲಿರುವ ನಿನಗೆ ಅಪಮಾನವಾಗಲು ಕಾರಣ ಇಲ್ಲ. ರಾಜ ಕುಮಾರಿಯಾದ ನಿನ್ನನ್ನು ಇತರರು ಪರಿಭವಪಡಿಸುವುದೂ ಹಾವಿನ ಹೆಡೆ ಯಲ್ಲಿರುವ ರತ್ನವನ್ನು ಕಿತ್ತುಕೊಳ್ಳಲು ಕೈ ಚಾಚುವುದೂ ಒಂದೇ. ಹೀಗಿರು ವಾಗ ಈ ಯೌವನದಲ್ಲಿ ಆಭರಣಗಳನ್ನೆಲ್ಲಾ ತೊರೆದು ವಾರ್ಧಕಾಲಂಕಾರವಾದ ಈ ನಾರುಮಡಿಯನ್ನೇಕೆ ಉಟ್ಟಿರುವೆ? ಸ್ವರ್ಗವನ್ನಪೇಕ್ಷಿಸಿರುವೆಯಾದರೂ ಈ ನಿನ್ನ ಶ್ರಮ ವ್ಯರ್ಥ; ನಿನ್ನ ತಂದೆಯ ಈ (ಹಿಮವತ್ ಪ್ರದೇಶಗಳೇ) ದೇವ ಭೂಮಿಗಳು. ಇನ್ನು ನಿನ್ನನ್ನು ಮದುವೆಯಾಗುವ ವರನನ್ನು ಬಯಸುತ್ತಿರುವೆ ಯಾದರೂ ಈ ತಪಸ್ಸು ಸಾಕು. ಕನ್ಯಾರತ್ನವಾದ ನೀನು ವರನನ್ನರಸುವು ದುಂಟೆ? ಆ ವರನೇ ನಿನ್ನನ್ನು ಹುಡುಕಿಕೊಂಡು ಬರಬೇಕು.'

ಜಟಿಲನ ಈ ಮಾತನ್ನು ಕೇಳಿ ಪಾರ್ವತಿಯು ಒಂದು ನಿಟ್ಟುಸಿರನ್ನು ಬಿಟ್ಟಳು. ಅದನ್ನು ಕಂಡು ಜಟಿಲ ಪುನಃ ಹೇಳಿದನು—

'ವರಾಪೇಕ್ಷೆಯೇ ನಿನ್ನ ತಪಸ್ಸಿನ ಉದ್ದೇಶವೆಂಬುದು ಈ ನಿನ್ನ ನಿಟ್ಟುಸಿರಿ ನಿಂದ ತಿಳಿದ ಹಾಗಾಯಿತು. ಆದರೆ ನನಗೇಕೋ ಸಂಶಯವಾಗುತ್ತಿದೆ. ನೀನು ಬಯಸಬಹುದಾದಂತಹ ಯೋಗ್ಯತೆಯುಳ್ಳ ವರನೊಬ್ಬನೂ ನನಗೆ ಕಾಣಿಸು ತ್ತಿಲ್ಲ. ಹೀಗಿರುವಾಗ ನೀನಾಗಿ ಬಯಸಿಯೂ ನಿನ್ನನ್ನು ವರಿಸಲೊಲ್ಲದವನೂ ಇದ್ದಾನೆಯೆ? ಇಷ್ಟು ದೀರ್ಘಕಾಲ ನಿನ್ನನ್ನು ಉಪೇಕ್ಷಿಸುತ್ತಿರುವ ನಿನ್ನ ವರನು ಕಠಿನಮನಸ್ಕನೇ ಆಗಿರಬೇಕು. ಮುನಿವ್ರತಗಳಿಂದ ನೀನು ಇಷ್ಟು ಕೃಶಳಾಗಿರು ವುದನ್ನು ಕಂಡೂ ಯಾವ ಸಹೃದಯನ ಮನಸ್ಸು ತಾನೇ ನೋಯುವುದಿಲ್ಲ! ಇಷ್ಟಾದರೂ ಆ ವರನು ನಿನ್ನಲ್ಲಿಗೆ ಬಾರದಿರುವುದನ್ನು ಗಮನಿಸಿದರೆ ಅವನು ತನ್ನ ಸೌಭಾಗ್ಯದ ಮದದಿಂದ ನಿನ್ನ ಸುಂದರ ಮುಖದ ಅವಲೋಕನಭಾಗ್ಯ ಕಳೆದುಕೊಂಡಿದ್ದಾನೆಂದೇ ಹೇಳಬೇಕು. ಅದಿರಲಿ, ಎಲೌ ಗೌರಿ, ಎಷ್ಟು ಕಾಲ ತಾನೇ ನೀನು ಹೀಗೆ ಶ್ರಮಿಸುತ್ತೀ? ಬ್ರಹ್ಮಚರ್ಯಾಶ್ರಮದಲ್ಲಿ ನಾನು ಸಂಪಾದಿಸಿರುವ ಸ್ವಲ್ಪ ತಪಸ್ಸು ನನ್ನಲ್ಲಿದೆ. ಅದರ ಅರ್ಧಭಾಗದಿಂದ ನಿನಗಿಷ್ಟ ನಾದ ವರನನ್ನು ಹೊಂದುವಿಯಂತೆ. ಆ ನಿನ್ನ ವರ ಯಾರು ತಿಳಿಸು.'

ಈ ರೀತಿ ಆ ಜಟಿಲನು ತನ್ನ ಮನಸ್ಸನ್ನರಿತೇ ಹೇಳಿದ ಮಾತನ್ನು ಕೇಳಿದ ಪಾರ್ವತಿ ಅವನಿಗೆ ತಾನೇ ಪ್ರತ್ಯುತ್ತರ ಕೊಡಲು ಅಸಮರ್ಥಳಾಗಿ ಪಕ್ಕದಲ್ಲಿದ್ದ ಸಖಿಯ ಕಡೆ ನೋಡಿ ಸಂಜ್ಞೆಮಾಡಿದಳು. ಆಗ ಆ ಸಖಿ ಹೇಳಿದಳು—

'ಎಲೌ ಸಜ್ಜನನೇ, ನಿನಗೆ ಕುತೂಹಲವಿದ್ದರೆ ಕೇಳು. ಏತಕ್ಕಾಗಿ ಇವಳು ಇಂತಹ ತಪಸ್ಸನ್ನಾಚರಿಸುತ್ತಿದ್ದಾಳೆ, ಹೇಳುತ್ತೇನೆ. ಇವಳು ಮಹೇಂದ್ರನೇ ಮೊದಲಾದ ಅಧಿದೇವತೆಗಳನ್ನೂ ದಿಕ್ಪಾಲಕರನ್ನೂ ಕಡೆಗೆಣಿಸಿ ಸೌಂದರ್ಯಕ್ಕೆ ವಶನಾಗದ ಆ ಪಿನಾಕಪಾಣಿ ಶಿವನನ್ನೇ ಪತಿಯನ್ನಾಗಿ ಹೊಂದಲಪೇಕ್ಷಿಸುತ್ತಿದ್ದಾಳೆ. ಹಿಂದೆ ತಪಸ್ಸಮಾಧಿಯಿಂದೆದ್ದ ಶಿವನ ದೃಷ್ಟಿ ತನ್ನ ಮೇಲೆ ಬಿದ್ದಿದ್ದಾಗ ಮನ್ಮಥನು ಹೂಡಿದ ಸಂಮೋಹನಾಸ್ತ್ರ ವಿಫಲವಾದುದನ್ನೂ, ತನ್ನ ಸೌಂದರ್ಯವನ್ನು ಕಣ್ಣುತುಂಬ ನೋಡಿಯೂ ಅದಕ್ಕೆ ಶಿವ ವಶನಾಗದೆ ಮನ್ಮಥನನ್ನು ಸುಟ್ಟು ಬೂದಿಮಾಡಿ ಬೇರೆಲ್ಲಿಗೋ ಹೊರಟುಹೋದುದನ್ನೂ ಕಂಡು ವ್ಯಥಿತಳಾದ ಪಾರ್ವತಿ, ಮನಸ್ಸಿಗೆ ನೆಮ್ಮದಿಯಿಲ್ಲದೆ, ಏನೋ ಒಂದು ವಿಧವಾಗಿರುತ್ತಿದ್ದಳು. ಅವಳು ಆಗಾಗ ಶಿವನ ಚರಿತ್ರವನ್ನು ಹಾಡುತ್ತಾ ಭಾವಪರವಶಳಾಗಿ ಕಣ್ಣೀರಿನಿಂದ ಕುತ್ತಿಗೆ ಬಿಗಿದು ಬರಲು, ಎಷ್ಟೋಪದಗಳನ್ನುಚ್ಚರಿಸದೆಯೇ ಇದ್ದಾಗ ಆವಳ ಹಾಡನ್ನು ಕೇಳುತ್ತಿದ್ದ ಕಿನ್ನರ ರಾಜಪುತ್ರಿಯರೂ ಅವಳ ಈ ಅವಸ್ಥೆಗಾಗಿ ಕಂಬನಿ ಸುರಿಸುತ್ತಿದ್ದರು. ರಾತಿಯೆಲ್ಲಾ ನಿದ್ದೆಯಿಲ್ಲದೆ ಬೆಳಗಿನ ಜಾವದಲ್ಲಿ ಮಾತ್ರ ಸ್ವಲ್ಪ ಜಂಪುಹತ್ತಿದಾಗ, ಶಿವನು ಹೊರಟು ಹೋಗುತ್ತಿರುವಂತೆ ಸ್ವಪ್ನಕಂಡು, 'ನೀಲಕಂಠ, ಎಲ್ಲಿಗೆ ಹೊರಟು ಹೋಗುತ್ತೀ' ಎಂದು ಕನವರಿಸುತ್ತಾ ಶಿವನನ್ನಾಲಿಂಗಿಸಲು ತನ್ನೆರಡು ತೋಳುಗಳನ್ನೂ ಚಾಚುತ್ತಾ ಎಚ್ಚರಗೊಳ್ಳುತ್ತಿದ್ದಳು. 'ಶಿವನೇ! ಪಂಡಿತರೂ ನಿನ್ನನ್ನು ಸರ್ವವ್ಯಾಪಿಯೆನ್ನುತ್ತಾರೆ. ಹೀಗಿರುವಾಗ ನಾನು ನಿನ್ನಲ್ಲಿ ಪ್ರೀತಿಯಿಟ್ಟದ್ದೇನೆಂಬುದು ನಿನಗೆ ಗೊತ್ತಿಲ್ಲವೇ?' ಎಂದು, ತಾನೇ ಬರೆದಿದ್ದ ಶಿವನ ಚಿತ್ರವನ್ನು ಕೈಯಲ್ಲಿ ಹಿಡಿದು, ಏಕಾಂತದಲ್ಲಿ ಹೀಯಾಳಿಸುತ್ತಿದ್ದಳು. ಹೀಗಿರಲು, ಜಗದೀಶ್ವರನಾದ ಆ ಶಿವನನ್ನು ಹೊಂದಲು ಎಷ್ಟೋ ಉಪಾಯಗಳನ್ನು ಯೋಚಿಸಿ ಅವೊಂದೂ ಸೂಕ್ತವಾಗಿ ತೋರದಿರಲು, ತಂದೆಯ ಅನುಮತಿ ಪಡೆದು ತಪಸ್ಸನ್ನಾಚರಿಸಲು ಇಲ್ಲಿಗೆ ನಮ್ಮೊಡನೆ ಬಂದುಬಿಟ್ಟಳು. ಇಲ್ಲಿಗೆ ಬಂದು ತಪಸ್ಸನ್ನಾರಂಭಿಸಿದ ಮೇಲೆ ಅವಳೇ ನೆಟ್ಟ ಮರಗಳು ಇವು. ಈ ಮರಗಳಲ್ಲೂ ಫಲ ಕಾಣಿಸಿಕೊಂಡಿದೆ. ಆದರೆ ಪಾರ್ವತಿಯ ಬಯಕೆಯ ಮೊಳಕೆಯೂ ಕೂಡ ಇನ್ನೂ ಹೊರಟಿಲ್ಲ. ಪ್ರಾರ್ಥಿತದುರ್ಲಭನಾದ ಆ ಶಿವನು ಅದೆಂದಿಗೆ ತಾನೆ ತಪಃಕೃಶಳಾದ ಪಾರ್ವತಿಯ ಮೇಲೆ ಅನುಗ್ರಹಮಾಡುವನೋ ಅರಿಯೆ.'

ಪಾರ್ವತಿಯ ಸಖಿಯು ಈ ರೀತಿ ಯಾವ ಮುಚ್ಚುಮರೆಯೂ ಇಲ್ಲದೆ ನಿಜಾಂಶವನ್ನು ತಿಳಿಸಿದ ಮೇಲೆ ಆ ನೈಷ್ಠಿಕ ಸುಂದರನಾದ ಜಟಿಲನು, ತನ್ನೊಳಗೇ ಆದ ಹರ್ಷವನ್ನು ಹೊರಗೆ ತೋರಿಸದೆ, ಉಮೆಯನ್ನು ಕುರಿತು 'ಇದೇನು ಪರಿಹಾಸದ ಮಾತೋ, ಇಲ್ಲ ನಿಜವೋ?' ಎಂದು ಕೇಳಿದನು. ಆದಕ್ಕೆ ಪಾರ್ವತಿ ಅಕ್ಷಮಾಲಿಕೆ ಹಿಡಿದ ಕೈಗಳನ್ನು ಜೋಡಿಸಿ, ಸ್ವಲ್ಪಕಾಲ ಮಾತುಗಳನ್ನು ಹೊಂದಿಸಿಕೊಂಡು, ಮಿತವಾಗಿ ಹೀಗೆ ಹೇಳಿದಳು—

'ವೇದವಿತ್ತುಗಳಲ್ಲಿ ಶ್ರೇಷ್ಠನಾದವನೇ, ನೀನು ಇಷ್ಟು ಹೊತ್ತು ಕೇಳಿದ್ದೆಲ್ಲ ನಿಜ. ಶಿವನ ಪತ್ನಿ ಎಂಬ ಉನ್ನತ ಪದವಿಗೇರಲು ಈ ನಾನು ಉತ್ಸುಕಳಾಗಿದ್ದೇನೆ. ಅದನ್ನು ಪಡೆಯುವುದಕ್ಕಾಗಿಯೇ ಈ ತಪಸ್ಸು. ಆಸೆಗೆ ಯಾವುದು ತಾನೇ ವಿಷಯವಾಗಲಾರದು?'

ಆಗ ಆ ಬ್ರಹ್ಮಚಾರಿಯು ಹೇಳಿದನು—

'ಮಹೇಶ್ವರನು ಎಲ್ಲರಿಗೂ ತಿಳಿದವನು. ನೀನಾದರೋ ಅವನನ್ನು ಬಯಸುತ್ತಿದ್ದೀ. ಆ ಶಿವನು ಅಮಂಗಲ ವಸ್ತುಗಳಲ್ಲಿ ಆಸಕ್ತನಾಗಿರುವುದನ್ನು ಪರಿಶೀಲಿಸಿದರೆ ನಿನ್ನ ಅಪೇಕ್ಷೆಯನ್ನನುಮೋದಿಸಲು ಸಾಧ್ಯವೇ ಇಲ್ಲ. ವಿವಾಹದ ಅಂಗವಾಗಿ ಕಂಕಣ ಕಟ್ಟಿದ ಈ ನಿನ್ನ ಕೈ ಶಿವನ ಹಸ್ತಾವಲಂಬನವನ್ನು, ಹಾವು ಸುತ್ತಿಕೊಂಡಿರುವ ಹಸ್ತದ ಅವಲಂಬನವನ್ನು, ಹೇಗೆ ತಾನೇ ಸಹಿಸಿಯಾತು? ಅದಿರಲಿ, ಮದುವೆಯ ಸಮಯದಲ್ಲಿ ನೀನುಡುವ ಕಲಹಂಸ ಲಕ್ಷಣವುಳ್ಳ ವಧೂ ದುಕೂಲವೂ, ವರನಾದ ಶಿವನು ಧರಿಸುವ ರಕ್ತಬಿಂದುಗಳು ತೊಟ್ಟಿಕ್ಕುತ್ತಿರುವ ಆನೆಯ ಚರ್ಮವೂ ಎಂದಾದರೂ ಹೊಂದಿಕೊಳ್ಳಲು ಯೋಗ್ಯವೇ, ನೀನೇ ಯೋಚಿಸು. ಅರಮನೆಯಲ್ಲಿ ಹೂ ಹಾಸಿಗೆಯ ಮೇಲೆ ನಡೆಯುವ ಅಲಕ್ತಕ ಬಣ್ಣದಿಂದ ಅಂಕಿತವಾದ ಈ ನಿನ್ನ ಪಾದಗಳು ಶಿವನ ಮನೆಯಾದ ಪ್ರೇತ ಭೂಮಿಗಳಲ್ಲಿ ಅಲ್ಲಲ್ಲೇ ಚೆಲ್ಲಿದ ಕೂದಲುಗಳ ಮೇಲೆ ಹೆಜ್ಜೆಯಿಡುವುದನ್ನು ನಿನ್ನ ಶತ್ರುವಾದರೂ ಸಮ್ಮತಿಸಬಲ್ಲನೆ? ಮದುವೆಯಾದ ಮೇಲೆ ಶಿವನ ವಕ್ಷಃಸ್ಥಲದ ಆಲಿಂಗನ ನಿನಗೆ ಸುಲಭವೇ ಆದರೂ ಹರಿಚಂದನದ ಲೇಪನಕ್ಕೆ ಯೋಗ್ಯವಾದ ನಿನ್ನ ಸ್ತನಗಳ ಮೇಲೆ ಶಿವನ ಎದೆಗೆ ಬಳಿದಿರುವ ಚಿತಾಭಸ್ಮವು ಅಂಟಿಕೊಳ್ಳುವುದಿಲ್ಲವೇ? ಇದಕ್ಕಿಂತ ಅಯೋಗ್ಯವಾದುದು ಬೇರೆ ಉಂಟೆ? ರಾಜಕುಮಾರಿಯಾದ ನೀನು ಗಜರಾಜನ ಮೇಲೆ ಕುಳಿತು ಮದುವೆಯ ಮೆರವಣಿಗೆಯಲ್ಲಿ

ಹೋಗುವುದು ಸರಿ. ಆದರೆ ಶಿವನ ಪತ್ನಿಯಾಗಿ ಅವನ ವಾಹನವಾದ ಮುದಿ ವೃಷಭದ ಮೇಲೆ ಕುಳಿತು ಹೋಗುವುದನ್ನು ಜನರೆಲ್ಲ ನೋಡಿ ನಗುತ್ತಾರಲ್ಲ! ಮೊಟ್ಟಮೊದಲೇ ನಿನಗೆ ಇದೊಂದು ವಿಡಂಬನೆಯಲ್ಲವೇ? ಕಾಂತಿಮತಿಯಾದ ಚಂದ್ರನ ಕಲೆಯಂತೆಯೇ ನೀನೂ ಶಿವನೊಡನೆ ಸಮಾಗಮ ಬಯಸಿ ಶೋಚನೀಯಳಾಗಿಬಿಟ್ಟದ್ದೀಯೆ. ವರನಲ್ಲಿ ಸಾಮಾನ್ಯವಾಗಿ ನಿರೀಕ್ಷಿಸುವ ಯಾವ ಗುಣ ಶಿವನಲ್ಲಿದೆ, ಹೇಳು. ರೂಪ ನೋಡಿದರೆ ವಿರೂಪನಾದ ಮುಕ್ಕಣ್ಣ; ಕುಲ ಯಾವುದೋ ಗೊತ್ತೇ ಇಲ್ಲ; ಐಶ್ವರ್ಯವೋ ಅಂದರೆ ಹೊದೆಯಲೂ ಬಟ್ಟೆ ಇಲ್ಲದ ದಿಗಂಬರ. ಈ ತೆರನಾದ ಶಿವನೆಲ್ಲಿ? ಪುಣ್ಯಲಕ್ಷಣೆಯಾದ ನೀನೆಲ್ಲಿ? ನಿನ್ನ ಮನೋರಥ ಅಸತ್ಪಾತ್ರದಲ್ಲಿ ನೆಲಸಿದೆ. ಅದನ್ನು ಬೇರೆ ಕಡೆ ತಿರುಗಿಸು.'

ಈ ರೀತಿ ಜಟಿಲನು ತನ್ನ ಅಭಿಪ್ರಾಯಕ್ಕೆ ತೀರ ವಿರುದ್ಧವಾಗಿ ವಾದಿಸಿದುದನ್ನು ಕೇಳಿ ಪಾರ್ವತಿ ಕೋಪದಿಂದ ಹುಬ್ಬು ಗಂಟಿಕ್ಕಿ ಕಣ್ಣು ಕೆಂಪಗೆ ಮಾಡಿಕೊಂಡು ಹೇಳಿದಳು.—

"ಶಿವನನ್ನು ನೀನು ಸರಿಯಾಗಿ ತಿಳಿದಿಲ್ಲ. ಆದ್ದರಿಂದಲೇ ನೀನು ಈ ರೀತಿ ನನಗೆ ಹೇಳುತ್ತಿದ್ದೀಯೆ. ಮಹಾತ್ಮರ ಚರಿತ ಈ ಲೋಕದ ರೀತಿಗಿಂತ ಬೇರೆಯಾದುದು. ಅದರ ಕಾರಣವನ್ನು ಊಹಿಸಲೂ ಸಾಧ್ಯವಿಲ್ಲ. ಮಂದಮತಿಗಳು ಇದನ್ನರಿಯದೆ ಅವರನ್ನು ದೂಷಿಸುತ್ತಾರೆ. ಶಿವನು ಅಮಂಗಲ ದ್ರವ್ಯಗಳಲ್ಲಿ ನಿರತನೆಂದು ನೀನು ಹೇಳಿದೆ. ಅನರ್ಥಗಳನ್ನು ಪರಿಹರಿಸಬೇಕೆಂಬುವವನೂ ಐಶ್ವರ್ಯಾಭಿಲಾಷೆಯುಳ್ಳವನೂ ಮಂಗಳ ದ್ರವ್ಯಗಳನ್ನು ಸೇವಿಸಬೇಕು. ಜಗತ್ತಿಗೇ ರಕ್ಷಕನೂ, ಆಸೆಯೇ ಇಲ್ಲದವನೂ ಆದ ಶಿವನಿಗೆ ಈ ಮಂಗಳದ್ರವ್ಯಗಳಿಂದಾಗಬೇಕಾದುದಾದರೂ ಏನು? ಶಿವನು ಅಕಿಂಚನನೇನೋ ಹೌದು; ಆದರೆ ಅವನು ಎಲ್ಲ ಸಂಪತ್ತುಗಳಿಗೂ ಉತ್ಪತ್ತಿಸ್ಥಾನ ಅಲ್ಲವೆ? ಶ್ಮಶಾನವಾಸಿಯಾಗಿದ್ದರೂ ತ್ರಿಲೋಕನಾಥನಲ್ಲವೆ? ಭಯಂಕರ ರೂಪವುಳ್ಳವನಾದರೂ ಮಂಗಳಕರನಾದ ಶಿವನಲ್ಲವೆ? ಪಿನಾಕಪಾಣಿಯಾದ ಅಂತಹ ಶಿವನ ನಿಜ ಸ್ವರೂಪವನ್ನು ಯಾರು ತಾನೇ ಬಲ್ಲರು? ವಿಶ್ವಮೂರ್ತಿಯಾದ ಶಿವನ ಶರೀರ ಭೂಷಣಗಳಿಂದ ಬೆಳಗುತ್ತಿರಬಹುದು; ಹಾವು ಸುತ್ತಿಕೊಂಡಿರಬಹುದು; ಗಜಾಜಿನವನ್ನು ಹೊದೆದಿರಬಹುದು; ಪೀತಾಂಬರವನ್ನು ಧರಿಸಿರಬಹುದು; ಕಪಾಲವನ್ನು ಹಿಡಿದಿರಬಹುದು; ಚಂದ್ರನನ್ನು ಕಿರೀಟವಾಗಿ ಧರಿಸಿರಬಹುದು;

ಎಲ್ಲವೂ ಸಂಭವವೇ. ಹೀಗೆಯೇ ಇದೆ ಎಂದು ನಿರ್ಧರಿಸಲು ಸಾಧ್ಯವೇ ಇಲ್ಲ. ಶಿವನು ಮೈಮೇಲೆ ಚಿತಾಭಸ್ಮ ಬಳಿದುಕೊಂಡಿದ್ದಾನೆಂದು ನೀನು ಹೇಳಿದೆ. ಹೌದು. ಅವನ ದೇಹದೊಡನೆ ಸಂಸರ್ಗ ಹೊಂದಿದ ಆ ಚಿತಾಭಸ್ಮವೂ ರಜೋಗುಣವನ್ನು ವಿಶುದ್ಧ ಮಾಡುವ ಶಕ್ತಿ ಪಡೆಯುತ್ತದೆ. ಆದ್ದರಿಂದಲೇ ಅಲ್ಲವೆ ಶಿವನ ನೃತ್ಯಾಭಿನಯ ಸಮಯದಲ್ಲಿ ಕೆಳಗುದುರಿದ ಆ ಭಸ್ಮವನ್ನು ದೇವತೆಗಳು ತಮ್ಮ ಶಿರಸ್ಸುಗಳಲ್ಲಿ ಧರಿಸುತ್ತಾರೆ. ಐರಾವತದ ಮೇಲೆ ಸವಾರಿಮಾಡುವ ಇಂದ್ರನೂ ಕೂಡ ಬಡವನೂ ಮುದಿ ಎತ್ತಿನಮೇಲೆ ಸವಾರಿಮಾಡುವವನೂ ಆದ ಶಿವನ ಪಾದಗಳಮೇಲೆ ತಲೆಯಿಟ್ಟು ನಮಸ್ಕರಿಸುತ್ತಾನಲ್ಲವೇ? ಶಿವನಲ್ಲಿ ದೋಷವನ್ನೇ ಹೇಳಬಯಸುತ್ತಿದ್ದರೂ ಅವನ ಒಂದು ಗುಣವನ್ನು ನೀನು ಹೇಳಿಬಿಟ್ಟಿದ್ದೀಯೆ, ಅವನ ಜನ್ಮ ಯಾರಿಗೂ ತಿಳಿಯದಂತಹುದೆಂದು. ಆತ್ಮಭೂ ಆದ ಬ್ರಹ್ಮನಿಗೂ ಕಾರಣನಾಗಿರುವ ಶಿವನ ಜನ್ಮ ಎಲ್ಲರಿಗೂ ಹೇಗೆ ತಾನೇ ಗೋಚರವಾದೀತು?

'ಇನ್ನು ಈ ವಿವಾದ ಸಾಕು. ಶಿವನು ಎಂತಹವನಾದರೂ ಆಗಿರಲಿ, ನನ್ನ ಮನಸ್ಸು ಅವನಲ್ಲೇ ಭಾವೈಕರಸವಾಗಿ ನೆಲಸಿದೆ. ನನ್ನ ಇಷ್ಟದಂತೆಯೇ ಆಚರಿಸುವವಳು ನಾನು. ಇತರರ ಆಡಿಕೆಯ ಮಾತನ್ನು ಲಕ್ಷಿಸುವುದಿಲ್ಲ."

ಇದಕ್ಕೆ ಪ್ರತಿಯಾಗಿ ಜಟಿಲನು ಇನ್ನೂ ಏನೋ ಹೇಳಬಯಸುತ್ತಿರುವುದನ್ನು ಪಾರ್ವತಿ ಗಮನಿಸಿ ಸಖಿಯ ಕಡೆ ತಿರುಗಿಕೊಂಡು ಹೇಳಿದಳು—

"ಸಖಿ, ಈತನಿನ್ನೂ ಏನೋ ಹೇಳಬೇಕೆಂದಿದ್ದಾನೆ. ಅವನನ್ನು ತಡೆ. ಮಹಾತ್ಮರನ್ನು ನಿಂದಿಸುವವರೂ ಅಂತಹ ಮಾತು ಕೇಳುವವರೂ ಒಟ್ಟಿಗೇ ಪಾಪಭಾಗಿಗಳಾಗುತ್ತಾರೆ. ಅಥವಾ ಇರು, ನಾನೇ ಬೇರೆಕಡೆಗೆ ಹೋಗುತ್ತೇನೆ."

—ಹೀಗೆಂದು ಹೇಳಿ ರಭಸದಿಂದ ಪಾರ್ವತಿ ಹೊರಡಲುದ್ಯುಕ್ತಳಾದಳು. ಅಷ್ಟರಲ್ಲೇ ಜಟಿಲನೂ ತನ್ನ ನಿಜರೂಪವನ್ನು ತಾಳಿ ನಗುಮುಖನಾಗಿ ಪಾರ್ವತಿಯ ಕೈಹಿಡಿದುಕೊಂಡನು. ಪಾರ್ವತಿಗೆ ಲಜ್ಜೆಯೂ ಸಂತೋಷವೂ ಏಕಕಾಲದಲ್ಲೇ ಉಂಟಾಯಿತು.

ಇದೇ ಲೇಖಕರ ಕನ್ನಡ ಅನುವಾದ–ಪೀಠಿಕೆ–ಟಿಪ್ಪಣಿಗಳೊಡನೆ

ಸಂಸ್ಕೃತ ನಾಟಕಗಳು	Rs. P.
ಸ್ವಪ್ನವಾಸವದತ್ತ (ಭಾಸವಿರಚಿತ)	6-00
ಊರುಭಂಗ (ಭಾಸವಿರಚಿತ)	3–00
ಪ್ರತಿಮಾ ನಾಟಕ (ಭಾಸವಿರಚಿತ)	4-00
ಅಭಿಷೇಕನಾಟಕ (ಭಾಸವಿರಚಿತ)	4–00
ಪಂಚರಾತ್ರಂ (ಭಾಸವಿರಚಿತ)	4–50
ಪ್ರತಿಜ್ಞಾಯೌಗಂಧರಾಯಣ (ಭಾಸವಿರಚಿತ)	4–50
— ,, — ಕನ್ನಡ ಅನುವಾದ–ಟೀಕೆ–ಪೀಠಿಕೆ ಮಾತ್ರ	2–25
ವಿಕ್ರಮೋರ್ವಶೀಯಂ (ಕಾಳಿದಾಸವಿರಚಿತ)	5-00
ರತ್ನಾವಳೀ (ಶ್ರೀಹರ್ಷರಚಿತ) ಕನ್ನಡ ಅನುವಾದ–ಟೀಕೆ–ಪೀಠಿಕೆ ಮಾತ್ರ	1–50
ನಾಗಾನಂದ (ಶ್ರೀಹರ್ಷರಚಿತ) ಕನ್ನಡ ಅನುವಾದ–ಟೀಕೆ–ಪೀಠಿಕೆ ಮಾತ್ರ	1–75
ಸಂಸ್ಕೃತ ಕಾವ್ಯಗಳು	
ರಘುವಂಶ ಸರ್ಗ ೪	1–12
—,,— ಸರ್ಗ ೬	2–60
—,,— ಸರ್ಗ ೧೩	2–50
—,,— ಸರ್ಗ ೧೪	2–50
ಬುದ್ಧಚರಿತ ಸರ್ಗ ೧	2–50
—,,— ಸರ್ಗ ೩	2-50
ಕುಮಾರಸಂಭವ ಸರ್ಗ ೩	2–25
—,,— ಸರ್ಗ ೫	2-50
—,,— ಸರ್ಗ ೬	2-50
ನೀತಿಶತಕ (ಭರ್ತೃಹರಿ ವಿರಚಿತ)	2–50
ಚಂಪೂರಾಮಾಯಣ— ಅರಣ್ಯಕಾಂಡ	2-75
— ,, — —ಕಿಷ್ಕಿಂಧಾಕಾಂಡ	2–75
ಅಮರ ಶಬ್ದ ಧಾತುರೂಪ	0–62
ಸಂಸ್ಕೃತ ಸಾಹಿತ್ಯದ ಸಂಕ್ಷಿಪ್ತ ಇತಿಹಾಸ	5-00
ಸ್ತೋತ್ರಗ್ರಂಥಗಳು	
ಸ್ತೋತ್ರರತ್ನ-ಚತುಃಶ್ಲೋಕೀ–ನೃಸಿಂಹಪಂಚಾಮೃತ	0–75
ಗದ್ಯತ್ರಯ (ಶ್ರೀ ರಾಮಾನುಜಾಚಾರ್ಯ ವಿರಚಿತ)	ಪ್ರತಿಗಳು ಮುಗಿದಿವೆ
ಅಹೋಬಿಲ ಮಠ ವೈಭವ	1–50